
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಧರ್ಮಶಾಲಾದಲ್ಲಿ ಭಾನುವಾರ ದ.ಆಫ್ರಿಕಾ ವಿರುದ್ಧ ನಡೆದ ಮೂರನೇ ಟಿ-20 ಪಂದ್ಯದಲ್ಲಿ 2 ವಿಕೆಟ್ ಪಡೆದು ಮಿಂಚಿದ ಭಾರತ ತಂಡದ ವರುಣ್ ಚಕ್ರವರ್ತಿ...

15 ಡಿಸೆಂಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 273 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಶಾಲೆಗಳಲ್ಲಿ ಏನನ್ನು ಬೋಧಿಸಬೇಕು ? » 2



ಭಾರತಕ್ಕೆ ಸಾಧಾರಣ ಗುರಿ » 3



ಮತಗಳ್ಳತನ ವಿರುದ್ಧ ಕಾಂಗ್ರೆಸ್ ರಣ ಕಹಳೆ » 4

# ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅಸ್ತಂಗತ

## ಕಳಚಿದ ವೀರಶೈವ-ಲಿಂಗಾಯತ ಸಮಾಜದ ಹಿರಿಯ ಕೊಂಡಿ | ಗಣ್ಯರ ಸಂತಾಪ

• ಪ್ರಜೋದಯ ವರದಿ

**ಬೆಂಗಳೂರು:** ಅಖಿಲ ಭಾರತ ವೀರ ಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಹಾಗು ದೇಶದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ (94) ಅವರು ಭಾನುವಾರ ಅಸ್ತಂಗತರಾದರು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಗಣಿ ಮತ್ತು ಭೂವಿಜ್ಞಾನ ಸಚಿವರೂ ಆಗಿರುವ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿ ಮೂವರು ಪುತ್ರರು, ನಾಲ್ವರು ಪುತ್ರಿಯರು, ಸಂಸದೆ, ಸೊಸೆ ಡಾ. ಪ್ರಭಾ ಮಲ್ಲಿಕಾರ್ಜುನ್ ಇದ್ದಾರೆ.

ಶಾಮನೂರು ಕಲ್ಲಪ್ಪ-ಸಾವಿತ್ರಮ್ಮ ದಂಪತಿ ಪುತ್ರರಾಗಿ 1931ರ ಜೂ. 16ರಂದು ಜನಿಸಿದ ಶಾಮನೂರು ಶಿವಶಂಕರಪ್ಪ ಮೂಲತಃ ಉದ್ಯಮಿ. ರಾಜಕೀಯ ಕ್ಷೇತ್ರ ಪ್ರವೇಶಿಸಿದ



ಅವರು 6 ಬಾರಿ ಶಾಸಕರಾಗಿ, ಸಚಿವರಾಗಿ ಹಾಗು ಒಮ್ಮೆ ಸಂಸದರಾಗಿ ಸೇವೆ ಸಲ್ಲಿಸಿದ್ದಾರೆ. ಸುದೀರ್ಘ ಅವಧಿಗೆ ಕೆಪಿಸಿಸಿ ಖಜಾಂಚಿಯಾಗಿದ್ದರು.

1969ರಲ್ಲಿ ನಗರಸಭೆ ಮೂಲಕ ರಾಜಕೀಯ ಪ್ರವೇಶಿಸಿದ ಶಾಮನೂರು ಶಿವಶಂಕರಪ್ಪ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. 1994ರಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಸ್ಪರ್ಧಿಸಿ ಆಯ್ಕೆಯಾದರು. ಆಗ ಅವರಿಗೆ 63 ವರ್ಷ ವಯಸ್ಸಾಗಿತ್ತು. ಶಾಸಕರಾಗಿ, ಸಂಸದರಾಗಿ ನಿರಂತರವಾಗಿ ಆಯ್ಕೆಯಾದ ಅವರು ವಯಸ್ಸಾದಂತೆ ರಾಜಕಾರಣದಲ್ಲಿ ಮೇಲೇರಿದರು. ಶಾಮನೂರು ಶಿವಶಂಕರಪ್ಪ 2012ರಿಂದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರಾಗಿದ್ದರು. ಲಿಂಗಾಯತ ಪ್ರತ್ಯೇಕ ಧರ್ಮದ

» ನಾಲ್ಕನೇ ಪುಟದಲ್ಲಿ

### ದಾವಣಗೆರೆಯಲ್ಲಿ ಇಂದು ಅಂತ್ಯಕ್ರಿಯೆ

ಬೆಂಗಳೂರಿನ ಬಳ್ಳಾರಿ ರಸ್ತೆ ಪ್ಯಾಲೇಸ್ ಗ್ರೌಂಡ್ ಎದುರಿನ ಮುಖ್ಯ ಕಚೇರಿಯಲ್ಲಿ ಭಾನುವಾರ ಪಾರ್ಥಿವ ಶರೀರದ ಅಂತಿಮ ದರ್ಶನ ವ್ಯವಸ್ಥೆ ಮಾಡಲಾಗಿತ್ತು. ರಾಜಕೀಯ ಗಣ್ಯರು, ಸಮಾಜದ ಮುಖಂಡರು ಹಾಗು ಅವರ ಅಭಿಮಾನಿಗಳು ಪಾರ್ಥಿವ ಶರೀರ ಅಂತಿಮ ದರ್ಶನ ಪಡೆದರು. ಸೋಮವಾರ ದಾವಣಗೆರೆಗೆ ಪಾರ್ಥಿವ ಶರೀರ ತೆಗೆದುಕೊಂಡು ಹೋಗಲಾಗುತ್ತದೆ.

### ಹಲವು ಗಣ್ಯರ ಸಂತಾಪ

ಶಾಮನೂರು ಶಿವಶಂಕರಪ್ಪ ನಿಧನಕ್ಕೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮುಖ್ಯ ಮಂತ್ರಿ ಸಿದ್ದರಾಮಯ್ಯ, ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಂಸದ ಶ್ರೇಯಸ್ ಪಟೇಲ್ ಸೇರಿ ಅನೇಕರು ಸಂತಾಪ ಸೂಚಿಸಿದ್ದಾರೆ.

### ಶಿವಶಂಕರಪ್ಪ ರಾಜಕೀಯ ಜೀವನದ ಹಾದಿ

- 1931 ಜೂನ್ 16ರಂದು ಶಾಮನೂರು ಕಲ್ಲಪ್ಪಸಾವಿತ್ರಮ್ಮ ದಂಪತಿ ಪುತ್ರರಾಗಿ ಜನನ
- 1969ರಲ್ಲಿ ಪುರಸಭೆ ಸದಸ್ಯರಾಗಿ ಮೊದಲ ಬಾರಿಗೆ ಆಯ್ಕೆ
- 1972ರಲ್ಲಿ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ
- 1971ರಿಂದ 73ರ ವರೆಗೆ ದಾವಣಗೆರೆ ನಗರಸಭೆ ಅಧ್ಯಕ್ಷ
- 1994-1998 ದಾವಣಗೆರೆ ಕ್ಷೇತ್ರದ ವಿಧಾನಸಭಾ ಸದಸ್ಯ
- 1998-99 ದಾವಣಗೆರೆ ಲೋಕಸಭಾ ಸದಸ್ಯ
- 1999 ಲೋಕಸಭಾ ಚುನಾವಣೆಯಲ್ಲಿ ಸೋಲು
- 2003 ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಆಯ್ಕೆ
- 2008 ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಆಯ್ಕೆ
- 2013 ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಆಯ್ಕೆ, ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ತೋಟಗಾರಿಕೆ, ಎಪಿಎಂಸಿ ಸಚಿವ
- 2018-2023ರಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆ

# ಇಬ್ಬರು ಯುವ ಅಧಿಕಾರಿಗಳಿಗೆ ಕಮಾಂಡೆಂಟ್‌ಗಳಾಗಿ ಬಡ್ತಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಇಬ್ಬರು ಯುವ ಪೊಲೀಸ್ ಅಧಿಕಾರಿಗಳು ಕೆಎಸ್‌ಆರ್‌ಪಿ ಬೆಟಾಲಿಯನ್‌ಗಳ ಕಮಾಂಡೆಂಟ್‌ಗಳಾಗಿ ಬಡ್ತಿ ಹೊಂದಿದ್ದಾರೆ.

ಸಕಲೇಶಪುರ ತಾಲ್ಲೂಕು ಮಾವಿನಹಳ್ಳಿ ಗ್ರಾಮದ ನಿವೃತ್ತ ತಹಶೀಲ್ದಾರ್ ಅಣ್ಣೇಗೌಡ ಅವರ ಪುತ್ರ ಎಂ.ಎ. ಶರತ್ ಮಂಗಳೂರಿನಲ್ಲಿ ಡೆಪ್ಯೂಟಿ ಕಮಾಂಡೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಚನ್ನರಾಯಪಟ್ಟಣ ತಾಲ್ಲೂಕು ಹೊನ್ನಮಾರನಹಳ್ಳಿಯ ರಾಜೇಗೌಡ ಹಾಗು ರೋಹಿಣಿ ದಂಪತಿ ಪುತ್ರ ಆರ್.ಅರವಿಂದ್, ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಡೆಪ್ಯೂಟಿ ಕಮಾಂಡೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದರು.

ಈಗ ರಾಜ್ಯ ಸರ್ಕಾರ ಇಬ್ಬರಿಗೂ ಮುಂಬಡ್ತಿ ನೀಡಿದ್ದು, ಶರತ್ ಅವರು ಕೆಎಸ್‌ಆರ್‌ಪಿ 7ನೇ ಪಡೆಗೆ ಕಮಾಂಡೆಂಟ್ ಆಗಿ ನೇಮಕಗೊಂಡಿದ್ದಾರೆ. ಅವರನ್ನು ಮುನಿರಾಬಾದ್‌ನಲ್ಲಿರುವ ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲ/ಕಮಾಂಡೆಂಟ್ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.



ಅರವಿಂದ್ ಅವರು 1ನೇ ಪಡೆಯ ಕಮಾಂಡೆಂಟ್ ಆಗಿ ಬಡ್ತಿ ಹೊಂದಿದ್ದಾರೆ. ಅವರನ್ನು ಮುನಿರಾಬಾದ್‌ನ ಐಆರ್‌ಬಿಯ ಕಮಾಂಡೆಂಟ್ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಸಾಮಾನ್ಯ ಕೌಟುಂಬಿಕ ಹಿನ್ನಲೆಯಿಂದ ಬಂದ ಈ ಇಬ್ಬರು ಯುವ ಅಧಿಕಾರಿಗಳು ನಕ್ಸಲ್ ಹಾವಳಿ ಪೀಡಿತ ಛತ್ತೀಸ್‌ಗಢ, ಗ್ಯಾಂಗ್‌ಸ್ಟರ್‌ಗಳ ಹಾವಳಿ ಇರುವ ಉತ್ತರ ಪ್ರದೇಶ, ನೇಪಾಳ ಗಡಿಭಾಗಗಳಲ್ಲಿ ಚುನಾವಣಾ ಕರ್ತವ್ಯಗಳನ್ನು ಯಶಸ್ವಿಯಾಗಿ ನಿಬಾಯಿಸಿ ಬಂದಿರುವ ಅನುಭವ ಹೊಂದಿದ್ದಾರೆ. ಕಠಿಣ ಪರಿಶ್ರಮದ ಮೂಲಕ ಉನ್ನತ ಹುದ್ದೆಗೆ ಏರುವ ಮೂಲಕ ಅವರು ಸಮಾಜಕ್ಕೆ ಮಾದರಿಯೂ ಆಗಿದ್ದಾರೆ.

# ರಾಜಿ ಸಂಧಾನದಿಂದ ಶೀಘ್ರ ನ್ಯಾಯ-ಹಣ ಉಳಿತಾಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಲೋಕ ಅದಾಲತ್‌ನಲ್ಲಿ ಸಂಧಾನ ಮಾಡಿಕೊಂಡರೆ ನ್ಯಾಯಾಲಯದ ಖರ್ಚು ಹಾಗು ಸಮಯ ಉಳಿಸುವುದರ ಜೊತೆಗೆ ಶೀಘ್ರ ನ್ಯಾಯ ಸಿಗುತ್ತದೆ ಮತ್ತು ಎಲ್ಲರ ಸ್ನೇಹ-ಬಾಂಧವ್ಯ ಉಳಿಯುತ್ತದೆ ಎಂದು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎ.ಅರುಣಕುಮಾರಿ ಅವರು ತಿಳಿಸಿದರು.

ಪಟ್ಟಣದ ನ್ಯಾಯಾಲಯಗಳ ಸಂಕೀರ್ಣದಲ್ಲಿ 2025-26ನೇ ಸಾಲಿನ ಕೊನೆಯ ಮೆಗಾ ಲೋಕ ಅದಾಲತ್‌ನಲ್ಲಿ ಕಳೆದ ಹಲವು ವರ್ಷಗಳಿಂದ ಉಂಟಾಗಿದ್ದ ಭಿನ್ನಾಭಿಪ್ರಾಯದಿಂದ ಮದುವೆ ನಂತರ ಬೇರೆ ಬೇರೆಯಾಗಿ ವಾಸಿಸುತ್ತಿದ್ದ, ಕೋರ್ಟ್ ಮೆಟ್ಟಿಲೇರಿದ್ದ ಎರಡು ಜೋಡಿಗಳಿಗೆ ಬುದ್ದಿವಾದ ಹೇಳಿ ಮನವೊಲಿಸಿ ಪರಸ್ಪರ ಹಾರ ಬದಲಿಸಿ ದಂಪತಿಯನ್ನು ಒಂದುಗೂಡಿಸಿ



ಮಾತನಾಡಿದ ಅವರು, ದಂಪತಿ ಚಿಕ್ಕ ಚಿಕ್ಕ ವಿಚಾರಗಳಿಗೆ ಮನಸ್ಸು ಕೆಡಿಸಿಕೊಂಡು, ಕೆಲವು ಸಲ ಬೇರೆಯವರ ಮಾತು ಕೇಳಿ ಸಹ ನ್ಯಾಯಾಲಯಗಳಿಗೆ ವಿಚ್ಛೇದನಕ್ಕೆ ಅಥವಾ ಜೀವನಾಂಶಗಳಿಗೆ ದಾವೆ ಹಾಕಿದ್ದು, ರಾಜಿ ಸಂಧಾನದಿಂದ ಕುಟುಂಬ ಜೀವನ ಸುಧಾರಿಸುತ್ತದೆ. ಪ್ರತಿಯೊಂದಕ್ಕೂ ವ್ಯಾಜ್ಯ ಮಾಡಿ ಕೋರ್ಟ್‌ಗೆ ಬರುವುದು ಒಳ್ಳೆಯದಲ್ಲ. ವ್ಯಾಜ್ಯಗಳನ್ನು ದೂರ ಮಾಡಿ ಸುಖದಿಂದ ಬಾಳಬೇಕೆಂದು ದಾಂಪತ್ಯ ಕುಟುಂಬಕ್ಕೆ ತಿಳವಳಿಕೆ ನೀಡಿ ಮಕ್ಕಳು ಮತ್ತು ಪೋಷಕರ ಹಿತದೃಷ್ಟಿಯಿಂದ ಪರಸ್ಪರ ನಂಬಿಕೆಯಿಂದ ಬದುಕಲು ಪ್ರೋತ್ಸಾಹಿಸಿ, ಅವರಿಗೆ ಕಳೆದ ಕೆಲವು ದಿನಗಳಿಂದ ಬುದ್ದಿ ಹೇಳಿದ ಪರಿಣಾಮ ದಂಪತಿಗಳು ಪರಸ್ಪರ ಹಾರ ಬದಲಿಸಿಕೊಂಡು ಸಿಹಿ ತಿನಿಸಿ ಮನೆಗೆ ಹೋಗುತ್ತಿದ್ದಾರೆ. ಮತ್ತೆ ಎಂದೂ ನ್ಯಾಯಾಲಯಕ್ಕೆ ದಾವೆ ಹಾಕಿಕೊಂಡು ಬರಬೇಡಿ ಎಂದು ಹೇಳಲಾಗಿದೆ. ಪುನಃ ಒಂದಾದ ದಂಪತಿ ಇತರ ಪ್ರಕರಣಗಳ ದಂಪತಿಗಳಿಗೆ ಮಾದರಿಯಾಗಲಿ, ಪ್ರತಿಯೊಬ್ಬರು ಜೀವನದಲ್ಲೂ ಭಿನ್ನಾಭಿಪ್ರಾಯಗಳು ಇರುತ್ತವೆಂದರು.

ನಾಲ್ಕನೇ ಹೆಚ್ಚುವರಿ ಮತ್ತು ಜಿಲ್ಲಾ ಸತ್ರ ನ್ಯಾಯಾಧೀಶರಾದ ಎಂ.ಎಸ್.

» ನಾಲ್ಕನೇ ಪುಟದಲ್ಲಿ

# ಕಲಾ ಸೇವೆಗೆ ಸಮ್ಮಾನ ಸಂತಸದ ಕ್ಷಣ: ಗ್ಯಾರಂಟಿ ರಾಮಣ್ಣ

• ಪ್ರಜೋದಯ ವರದಿ

**ಹಾಸನ:** ಜಾನಪದ ಹಾಡುಗಳನ್ನೇ ಉಸಿರಾಗಿಸಿಕೊಂಡಿರುವ ನನ್ನಂತಹ ಕಲಾವಿದರಿಗೆ ವೇದಿಕೆ, ಸತ್ಕಾರ ಸಿಗುವುದು ಸಂತಸದ ಕ್ಷಣವೆಂದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಹಾಗು ಜಾನಪದ ಕಲಾವಿದ ಗ್ಯಾರಂಟಿ ರಾಮಣ್ಣ ಅವರು ಸಂತಸ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 1970ರ ದಶಕದಲ್ಲಿ ಕಡು ಬಡತನದ ನಡುವೆಯೂ ಅವರಿವರ ಬಳಿ ಆರ್ಥಿಕ ಸಹಾಯ ಪಡೆದು ಪಿಯುಸಿ ವರೆಗೆ ವ್ಯಾಸಂಗ ಮಾಡಿದೆ. ಕೌಟುಂಬಿಕ ಪರಿಸ್ಥಿತಿ ಹೀನಾಯವಾಗಿದ್ದರಿಂದ ವ್ಯಾಸಂಗ ಮುಂದುವರಿಸಲಾಗದೆ ಕೂಲಿ ಮಾಡುವುದು ಅನಿವಾರ್ಯವಾಗಿತ್ತು. 1979ರಲ್ಲಿ ರೈತ ಸಂಘದಿಂದ ನಡೆದ ಸರಳ ಮದುವೆ ಕಾರ್ಯಕ್ರಮದಲ್ಲಿ ನನಗೆ ಅನಿಸಿದ ಸಾಲುಗಳನ್ನು ಕವಿತೆ ರೂಪದಲ್ಲಿ ಹಾಡಿದ್ದಕ್ಕೆ ಜನರು ಒಂದು, ಎರಡು ರೂಪಾಯಿ ಹಣ ಕೊಟ್ಟಿದ್ದರು. ಆ ಬಳಿಕ ಹಾಡಿನ ಗೀಳು ನನ್ನಲ್ಲಿ ಹೆಚ್ಚಿತು. ರೈತ ಸಂಘದ ಹೋರಾಟಗಳಲ್ಲಿ ಹಾಡು ಹಾಡುತ್ತಾ ಅದನ್ನೇ ಜೀವನವನ್ನಾಗಿ ಮಾಡಿಕೊಂಡೆ ಎಂದು ಜೀವನಾನುಭವ ಹಂಚಿಕೊಂಡರು.

ಅಂದು ಪ್ರಾರಂಭವಾದ ಈ ಪಯಣ ಇಂದಿಗೂ ನಿಂತ ನೀರಾಗದೆ 55 ವರ್ಷಗಳಿಂದ ನನ್ನನ್ನು ಬೆಳೆಸಿಕೊಂಡು ಬಂದಿರುವುದಲ್ಲದೆ ರಾಜ್ಯ, ರಾಷ್ಟ್ರ ಮಟ್ಟದಲ್ಲೂ ಗುರುತಿಸುವಂತೆ ಮಾಡಿದೆ. ನನ್ನ ಏಳಿಗೆ ಬಯಸಿದ ಹಾಗು ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞನಾಗಿರುತ್ತೇನೆ. ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಬಿ.ಎನ್.ಸುಬ್ಬೇಗೌಡ,




ಚಿಂತಕ ಜ.ಹೊ.ನಾರಾಯಣಸ್ವಾಮಿ ಹಾಗು ರೈತ ನಾಯಕ ಪ್ರೊ. ನಂಜುಂಡಸ್ವಾಮಿ ಅವರು ನನ್ನ ಜೀವನದ ಮೇಲೆ ಪರಿಣಾಮ ಬೀರಿದ್ದು ಅವರ ಆಶೀರ್ವಾದದಿಂದಲೇ ಈ ಸಾಧನೆ ಸಾಧ್ಯವಾಗಿದೆ ಎಂದು ಸ್ಮರಿಸಿದರು.

ಸಮ್ಮೇಳನ ಉದ್ಘಾಟಿಸಿದ ಜಾನಪದ ಕಲಾವಿದ ಡಾ.ಪಿಚ್ಚಳ್ಳಿ ಶ್ರೀನಿವಾಸ ಅವರು ಮಾತನಾಡಿ, ಜಾನಪದ ಹಾಡುಗಳು ಕೇವಲ ಸಂಗೀತ, ರಾಗ ಮಾತ್ರವಲ್ಲದೆ ಜೀವನದ ಅನುಭವಗಳನ್ನು ತೆರೆದಿರುವ ವಿಶಿಷ್ಟ ಕಲೆಯಾಗಿದೆ. ಗ್ಯಾರಂಟಿ ರಾಮಣ್ಣ ಅವರು ಕವಿತೆಗಳ ಮೂಲಕ ಜನರಿಗೆ ಹತ್ತಿರವಾಗಿದ್ದಾರೆ. ಜೀವನದ ಅನುಭವಗಳನ್ನು ಕಾವ್ಯ ರೂಪಕ್ಕೆ ತರುವುದು ತಪಸ್ಸಿನ ಕೆಲಸ. ನಮ್ಮಲ್ಲಿರುವ ಜನಪದದ ವಿವೇಕ ಸಮಾಜದ ಕಣ್ಣು. ಅದನ್ನು ಕಾಪಾಡಿಕೊಳ್ಳುವುದು ಸಮಾಜದ ಆದ್ಯ ಕರ್ತವ್ಯವೆಂದರು.

ಪತ್ರಕರ್ತ ನಾಗರಾಜ್ ಹೆತ್ತೂರು ಅವರು ಮಾತನಾಡಿ, ಹಾಸನದ ಕಂಚಮಾರನಹಳ್ಳಿ ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದ ಗ್ಯಾರಂಟಿ ರಾಮಣ್ಣ ಆಫ್ರಿಕಾದಲ್ಲಿ ನಡೆದ ಕಾರ್ಯಕ್ರಮದ ಅತಿಥಿಯಾಗಿ ಆಯ್ಕೆಯಾಗಿರುವುದು ಸಾಧನೆಯೇ ಸರಿ. ಕಾರ್ಯಕ್ರಮಗಳಿಂದ ಬರುತ್ತಿದ್ದ ಬಿಡಿಗಾಸಿನಿಂದ ಚಪ್ಪಲಿ ಖರೀದಿಸಿ ಊರೂರು ಸುತ್ತಿ ತಮ್ಮ ಪ್ರತಿಭೆ ಪ್ರದರ್ಶಿಸಿದ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಬೇಕು. ಗ್ಯಾರಂಟಿ ರಾಮಣ್ಣ ಜಿಲ್ಲೆಯ ಹೆಮ್ಮೆ. ಅವರ ಕಲಾ ಸೇವೆಯನ್ನು ಎಲ್ಲರೂ ಗೌರವಿಸ ಬೇಕೆಂದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಿತು. ಕನ್ನಡ ಸಾಹಿತ್ಯ ಪರಿಷತ್ ಭವನದ ಆವರಣದಲ್ಲಿರುವ ಬುದ್ಧ, ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್, ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್, ರಂಗಕರ್ಮಿ ಪ್ರಸಾದ್ ರಕ್ಷಿದಿ, ರವಿ ನಾಕಲಗೂಡು, ಸಾಹಿತಿ ಎನ್.ಶೈಲಜಾ ಹಾಸನ, ನಾಗರಾಜ್ ದೊಡ್ಡಮನಿ, ಎಚ್.ಎಸ್. ಬಸವರಾಜ್ ಮತ್ತಿತರರಿದ್ದರು.

# ನಿರಂತರವಾಗಿ ಕಲಿಯುವ ಗುಣ ಬೆಳೆಸಿಕೊಳ್ಳಿ: ಜಿಲ್ಲಾಧಿಕಾರಿ ಲತಾಕುಮಾರಿ

• ಪ್ರಜೋದಯ ವರದಿ

**ಹಾಸನ:** ಜಗತ್ತು ತುಂಬಾ ವೇಗವಾಗಿ ಬದಲಾಗುತ್ತಿದೆ, ಬದಲಾವಣೆಗೆ ಒಗ್ಗಿಕೊಳ್ಳುವ, ನಿರಂತರವಾಗಿ ಕಲಿಯುವ ಗುಣ ಬೆಳೆಸಿಕೊಳ್ಳಿ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ 15ನೇ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ದೇಶದಲ್ಲಿ ಪ್ರತಿ ವರ್ಷ 50 ಲಕ್ಷಕ್ಕೂ ಹೆಚ್ಚು ಇಂಜಿನೀಯರಿಂಗ್ ಪದವೀಧರರು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಂದ ಹೊರಹೊಮ್ಮುತ್ತಿದ್ದಾರೆ. 1 ಕೋಟಿಗೂ ಹೆಚ್ಚು ವಿದ್ಯಾರ್ಥಿಗಳು ವಿವಿಧ




ಪದವಿಗಳನ್ನು ಪೂರೈಸುತ್ತಿದ್ದಾರೆ. ಪದವಿ ಪ್ರಮಾಣ ಪತ್ರ ತೆಗೆದುಕೊಳ್ಳುವುದು ಇಂದಿನ ವಿದ್ಯಾರ್ಥಿಗಳ ಮುಂದಿರುವ ಸವಾಲಲ್ಲ. ಓದಿದ ಪದವಿಗೆ ಸರಿ ಹೊಂದುವ ಉದ್ಯೋಗ ದಕ್ಕಿಸಿಕೊಳ್ಳುವುದು ನಿಜಕ್ಕೂ ಸವಾಲಿನ ಸಂಗತಿ. ಪದವಿ ಪೂರೈಸುವ ವಿದ್ಯಾರ್ಥಿಗಳಲ್ಲಿ ಓದಿಗೆ ತಕ್ಕ ಉದ್ಯೋಗ ಪಡೆಯುವವರ ಪ್ರಮಾಣ ಶೇ.45ಕ್ಕಿಂತ ಕಡಿಮೆ ಇದೆ ಎಂದು ತಿಳಿಸಿದರು.

ಹೆಚ್ಚು ವಿದ್ಯಾರ್ಥಿನಿಯರು ಪದವಿ ಶಿಕ್ಷಣ ಪಡೆಯುತ್ತಿದ್ದರೂ, ಉದ್ಯೋಗದಲ್ಲಿ ಮುಂದುವರೆಯುತ್ತಿರುವ ವಿದ್ಯಾರ್ಥಿನಿಯರ ಪ್ರಮಾಣ ಕಡಿಮೆ ಇದೆ. ವಿದ್ಯಾರ್ಥಿನಿಯರ ಪದವಿ ಪ್ರಮಾಣ ಪತ್ರ ಮನೆಯಲ್ಲಿ ಪ್ರದರ್ಶನಕ್ಕಿಡ ಬೇಕಾದ ಟ್ರೋಫಿ ಅಲ್ಲ. ವಿದ್ಯಾರ್ಥಿನಿಯರು ಓದಿಗೆ ತಕ್ಕ ಕೆಲಸಗಳನ್ನು ನಿರ್ವಹಿಸುವ ಮೂಲಕ

» ನಾಲ್ಕನೇ ಪುಟದಲ್ಲಿ

# ಪಿಕ್‌ಅಪ್ ಡಿಕ್ಕಿ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಬೇಲೂರು:** ರಸ್ತೆ ಪಕ್ಕ ನಿಂತಿದ್ದ ಲಾರಿಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಬೊಲೆರೋ ಪಿಕ್‌ಅಪ್ ಚಾಲಕ ವ್ಯಕ್ತಿಯೊಬ್ಬರಿಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಪಟ್ಟಣದಲ್ಲಿ ಶನಿವಾರ ಸಂಜೆ ನಡೆದಿದೆ.

ಪಟ್ಟಣದ ಜೈಭೀಮ್ ನಗರದ ಲೋಕೇಶ್ (30) ಮೃತರು. ಡೈರಿಗೆ ಹಾಲು ಹಾಕುವುದಕ್ಕಾಗಿ ಮುದಿಗೆರೆಗೆ ರಸ್ತೆಬದಿ ಕಾಲ್ನಡಿಗೆಯಲ್ಲಿ ಹೊರಟಿದ್ದರು. ಹಿಂದಿನಿಂದ ವೇಗವಾಗಿ ಬಂದ ಪಿಕ್‌ಅಪ್ ಚಾಲಕ ಮುಂದೆ ನಿಂತಿದ್ದ ಲಾರಿಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಹೋಗಿ ಲೋಕೇಶ್ ಅವರಿಗೆ ಡಿಕ್ಕಿ ಮಾಡಿದ್ದಾನೆ. ಅಪಘಾತ ರಭಸಕ್ಕೆ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

# ಬೈರಾಪುರ-ಮಗ್ಗೆ ರಸ್ತೆ ದುರಸ್ತಿ: ಸಂಚಾರ ಬಂದ್

• ಪ್ರಜೋದಯ ವರದಿ

**ಆಲೂರು:** ಬೇಲೂರು-ಕೊಡ್ಲಿಪೇಟೆ ರಾಜ್ಯ ಹೆದ್ದಾರಿ 110ರ ರಸ್ತೆಯು ಚನ್ನಾಪುರ ಬಳಿ ಕುಸಿದಿದ್ದು, ದುರಸ್ತಿ ಹಿನ್ನಲೆಯಲ್ಲಿ ಮುಂದಿನ 15 ದಿನಗಳ ಕಾಲ ಮಾರ್ಗದಲ್ಲಿ ಸಂಚಾರ ಬಂದ್ ಮಾಡಿ ವಾಹನ ಓಡಾಟಕ್ಕೆ ಪ್ರತ್ಯೇಕ ಮಾರ್ಗ ಕಲ್ಪಿಸಲಾಗಿದೆ.

ಬೈರಾಪುರದಿಂದ ಮಗ್ಗೆ ಮಾರ್ಗ ಮಧ್ಯೆ ರಸ್ತೆ ಕುಸಿದಿದೆ. ರಸ್ತೆಯಲ್ಲಿ ಎಲ್ಲಾ ರೀತಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ ಎಂದು ಲೋಕೋಪಯೋಗಿ ಇಲಾಖೆ ಸಕಲೇಶಪುರ ಉಪವಿಭಾಗದ ಸಹಾಯಕ ಕಾರ್ಯ ಪಾಲಕ ಅಭಿಯಂತರ ಮುರುಗೇಶ್ ಅವರು ತಿಳಿಸಿದ್ದಾರೆ. ಬೇಲೂರು-ಕೊಡ್ಲಿಪೇಟೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ 110ರ 50 ಕೀ. ಮೀ. ಉದ್ದದ ರಸ್ತೆಯು ಮಗ್ಗೆ ಗ್ರಾಮ



ಪಂಚಾಯಿತಿ ವ್ಯಾಪ್ತಿಯ ಚನ್ನಾಪುರ ಬಳಿ ಕೆರೆಯ ಏರಿಯ ಮೇಲೆ ಬಲಭಾಗದಲ್ಲಿ ಕುಸಿದಿದೆ. ತಡೆಗೋಡೆ ನಿರ್ಮಾಣವಾಗದೆ ವಾಹನ ಸಂಚಾರ ಮುಂದುವರಿದರೆ ರಸ್ತೆಗೆ ಹಾನಿ ಉಂಟಾಗುವ ಸಂಭವವಿರುವುದರಿಂದ ತಡೆಗೋಡೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಎಸ್‌ಡಿಆರ್‌ಎಫ್/ಎನ್‌ಡಿಆರ್‌ಎಫ್ ಅಡಿಯಲ್ಲಿ 35 ಲಕ್ಷ ರೂ. ಅನುದಾನ ಬಿಡುಗಡೆ ಯಾಗಿದ್ದು, ರಸ್ತೆಗೆ ತಡೆಗೋಡೆ ನಿರ್ಮಾಣ ಮಾಡಬೇಕಾಗಿರುವುದರಿಂದ 15 ದಿನಗಳ ಕಾಲ ತಾತ್ಕಾಲಿಕವಾಗಿ ಬಂದ್ ಮಾಡಬೇಕಿದೆ.

ವಾಹನ ಸವಾರರು ಬದಲಿ ರಸ್ತೆಯಾದ ರಾಷ್ಟ್ರೀಯ ಹೆದ್ದಾರಿ 75 ಮೂಲಕ ಪಾಳ್ಯ, ನಲ್ಲೂರು, ಬೆಟ್ಟಹಳ್ಳಿ ಕ್ರಾಸ್ ಮಾರ್ಗವಾಗಿ ಮಗ್ಗೆ ಗ್ರಾಮಕ್ಕೆ ತಲುಪಬೇಕೆಂದು ಅಧಿಕಾರಿಗಳು ತಿಳಿದ್ದಾರೆ.

# ಸಿಸಿಟಿವಿ ಕ್ಯಾಮರಾ, ವಹಿವಾಟಿನ ಲೆಕ್ಕ ಪಕ್ಕಾ ಇರಲಿ



• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡು ಭಾಗದಲ್ಲಿ ಕಾಫಿ ಹಾಗು ಮತ್ತಿತರ ಪದಾರ್ಥಗಳ ಕಳವು ಪ್ರಕರಣ ಹೆಚ್ಚುತ್ತಿದ್ದು, ವರ್ತಕರು ತಮ್ಮ ಅಂಗಡಿಗಳಿಗೆ ಕಡ್ಡಾಯವಾಗಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು ಹಾಗು ವಹಿವಾಟಿನ ಲೆಕ್ಕ ಹೊಂದಿರಬೇಕೆಂದು ಸಕಲೇಶಪುರ ಪೊಲೀಸ್ ಅಧೀಕ್ಷಕ ಎಸ್.ಕೆ. ಮಾಲತೇಶ್ ಅವರು ಹೇಳಿದರು.

ಗ್ರಾಮಾಂತರ ಠಾಣೆಯಲ್ಲಿ ನಡೆದ ಕಾಫಿ ವರ್ತಕರ ಸಭೆಯಲ್ಲಿ ಮಾತನಾಡಿದ ಅವರು, ವರ್ತಕರು ಕಾಫಿ, ಏಲಕ್ಕಿ, ಮೆಣಸು ಮಾರಾಟ ಮಾಡಲು ಬರುವವರ ಬಳಿ ಜಮೀನಿನ ಆರ್‌ಟಿಸಿ ಪಡೆಯಬೇಕು. ಅಂಗಡಿಯ ಒಳಭಾಗ ಮತ್ತು ಮುಂಭಾಗ ಹಾದು ಹೋಗಿರುವ ರಸ್ತೆಯ ದೃಶ್ಯಗಳು ಕಾಣುವ ಹಾಗೆ ಸಿಸಿಟಿವಿ ಕ್ಯಾಮರಾ ಕಡ್ಡಾಯವಾಗಿ ಅಳವಡಿಸಿ ಕನಿಷ್ಟ 3 ತಿಂಗಳ ಬ್ಯಾಕ್‌ಅಪ್ ಇಟ್ಟುಕೊಳ್ಳಬೇಕು. ಅಂಗಡಿಗಳಲ್ಲಿ ಒಂದು ರಿಜಿಸ್ಟರ್ ಇಟ್ಟು ಅದರಲ್ಲಿ ಪ್ರತಿದಿನ ಅವರ ಬಳಿಗೆ ಕಾಫಿ, ಏಲಕ್ಕಿ, ಮೆಣಸು ಮಾರಾಟ ಮಾಡಲು ಬರುವವರ ವಿಳಾಸ, ಮೊಬೈಲ್ ನಂಬರ್ ಹಾಗು ಅವರಿಂದ ಖರೀದಿಸಿದ ಕಾಫಿಯ ವಿವರವನ್ನು ನಮೂದು ಮಾಡಿಕೊಳ್ಳಬೇಕೆಂದು ಸೂಚನೆ ನೀಡಿದರು.

ಅನುಮಾನಸ್ಪದ ವ್ಯಕ್ತಿಗಳು ಕಾಫಿ, ಏಲಕ್ಕಿ, ಮೆಣಸು ಮಾರಲು ಬಂದಾಗ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ವರ್ತಕರು ಹಾಗು ಬೆಳೆಗಾರರು ಮುಂಜಾಗ್ರತಾ ಕ್ರಮ ವಹಿಸುವ ಮೂಲಕ ಕಳ್ಳತನ ಕಡಿಮೆ ಮಾಡಬಹುದು. ಅದಕ್ಕೆ ತಮ್ಮೆಲ್ಲರ ಸಹಕಾರ ಅತಿ ಮುಖ್ಯವಾಗಿರುತ್ತದೆ. ರಾತ್ರಿ ಗಸ್ತಿನ ವೇಳೆ ಅನುಮಾನಸ್ಪದವಾಗಿ ಓಡಾಡುವ ಮಾರುತಿ 800, ಓಮಿನಿ ಕಾರು, ಗೂಡ್ಸ್ ಆಟೋಗಳನ್ನು ಕಡ್ಡಾಯವಾಗಿ ತಪಾಸಣೆ ಮಾಡುವಂತೆ ಗಸ್ತು ಸಿಬ್ಬಂದಿಗೆ ಸೂಚಿಸಿದರು. ಯಸಳೂರು ಠಾಣೆ ಪಿಎಸ್‌ಐ ಸಲ್ಮಾನ್ ಖಾನ್ ತಂಬುಳ್ಳಿ ಇತರರಿದ್ದರು.

## ಬೇಸಿಗೆಯಲ್ಲಿ ಎದುರಾಗುವ ನೀರಿನ ಸಮಸ್ಯೆ ತಪ್ಪಿಸಲು ಗ್ರಾ.ಪಂ. ಪರಿಹಾರ | ವೀಕ್ಷಣೆಗೆ ಜನರ ದಂಡು

# ಕಾವೇರಿ ಪುಷ್ಕರಣಿ ಮತ್ಸ್ಯ ರಕ್ಷಣೆಗೆ ಮರಳು ಮೂಟೆ ನೆರವು

• ಪ್ರಜೋದಯ ವರದಿ

**ಹಾಸನ:** ಮಳೆಗಾಲದಲ್ಲಿ ನದಿ ಭರ್ತಿಯಾಗಿ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುವ ಕಾವೇರಿ ವಹ್ನಿ ಪುಷ್ಕರಣಿಯ ಮತ್ಸ್ಯ ರಾಶಿಗೆ ಬೇಸಿಗೆಯಲ್ಲಿ ಎದುರಾಗುವ ನೀರಿನ ಬವಣೆ ತಪ್ಪಿಸಲು ನದಿಗೆ ಮರಳು ಮೂಟೆ ಕಟ್ಟಿ ಜೀವದಾನ ನೀಡುವ ಮಹತ್ಕಾರ್ಯಕ್ಕೆ ರಾಮನಾಥಪುರ ಗ್ರಾಮ ಪಂಚಾಯಿತಿ ಮುಂದಾಗಿದೆ.

ತಾಲ್ಲೂಕಿನ ರಾಮನಾಥಪುರದ ಪ್ರಸಿದ್ಧ ಕಾವೇರಿ ವಹ್ನಿ ಪುಷ್ಕರಣಿಯ ಮತ್ಸ್ಯ ರಾಶಿಗಳು ಭಕ್ತರನ್ನು ಸೆಳೆಯುವ ಆಕರ್ಷಣೀಯ ತಾಣವಾಗಿದೆ. ಆದರೆ, ಶಿಕಾರಿ, ನೀರಿನ ಅಭಾವದಿಂದ ತೊಂದರೆಗೀಡಾಗುವ ಮತ್ಸ್ಯ ರಾಶಿಗಳ ರಕ್ಷಣೆಗೆ ಕ್ರಮ ವಹಿಸಲಾಗಿದೆ ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

ರಾಮನಾಥಪುರ ಪ್ರಸನ್ನ ಸುಬ್ರಹ್ಮಣ್ಯಸ್ವಾಮಿ ಜಾತ್ರಾ ಮಹೋತ್ಸವದ ಹಿನ್ನಲೆಯಲ್ಲಿ ವಹ್ನಿ ಪುಷ್ಕರಣಿ ತಟದ ಮೆಟ್ಟಿಲುಗಳ ಬಳಿ ಶುಚಿಗೊಳಿಸಿ ಬಣ್ಣ ಬಳಿದು ಸಿಂಗರಿಸಲಾಗಿದೆ. ಸಾಕಷ್ಟು ಭಕ್ತರು ಮೀನುಗಳನ್ನು ನೋಡಲು ಆಗಮಿಸುತ್ತಿದ್ದು, ವಹ್ನಿ ಪುಷ್ಕರಣಿ ತಟ ಭಕ್ತರಿಂದ ತುಂಬಿ ತುಳುಕುತ್ತಿದ್ದು, ಮೀನುಗಳ ರಕ್ಷಣೆ ಮಾಡುವುದು ಅನಿವಾರ್ಯವಾಗಿದೆ.



**ಬೇಸಿಗೆಯಲ್ಲಿ ಆಹಾರ ಕೊರತೆ**

ಶ್ರೀ ಕ್ಷೇತ್ರದಲ್ಲಿ ಮಾರ್ಗಶಿರ ಮಾಸದಲ್ಲಿ ತಿಂಗಳ ಕಾಲ ನಡೆಯುವ ಜಾತ್ರೆ ಸಮಯದಲ್ಲಿ ಮೀನುಗಳಿಗೆ ಆಹಾರದ ಕೊರತೆ ಕಾಡುವುದಿಲ್ಲ. ಮತ್ಸ್ಯ ರಾಶಿ ಕಣ್ತುಂಬಿಕೊಳ್ಳುವ ಸಲುವಾಗಿ ಜಾತ್ರೆಗೆ ಬರುವ ಸಹಸ್ರಾರು ಭಕ್ತರು ಕಡಲೆಪುರಿ ಸಿಹಿ ತಿನಿಸುಗಳನ್ನು ಮೀನುಗಳಿಗೆ ನೀಡುತ್ತಾರೆ. ಆದರೆ, ಬೇಸಿಗೆಯ ದಿನಗಳಲ್ಲಿ ಶ್ರೀ ಕ್ಷೇತ್ರಕ್ಕೆ ಬರುವ ಭಕ್ತರ ಸಂಖ್ಯೆ ಕಡಿಮೆ. ಹೀಗಾಗಿ ವಹ್ನಿ ಪುಷ್ಕರಣಿಗೆ ಜನರು ಭೇಟಿ ನೀಡುವುದಿಲ್ಲ. ಪರಿಣಾಮ ಮೀನುಗಳಿಗೆ ಆಹಾರದ ಕೊರತೆ ಕಾಡುತ್ತದೆ. ನದಿ ನೀರು ತಗ್ಗಿದ್ದರಿಂದ ಆಹಾರ ಅರಸಿ ಕೆಲವು ಮೀನುಗಳು ವಹ್ನಿ ಪುಷ್ಕರಣಿಯಿಂದ ಹೊರಹೋಗುತ್ತವೆ. ನದಿ ನೀರು ಕಡಿಮೆಯಾದ ಸಂದರ್ಭದಲ್ಲಿ ಪ್ರತಿವರ್ಷ ಮೀನುಗಳ ಶಿಕಾರಿ ಕೂಡ ನಡೆಸಲಾಗುತ್ತಿದೆ. ರಾತ್ರಿ ವೇಳೆ ಮೀನುಗಳನ್ನು ಕದ್ದು ಸಾಗಿಸುವ ಕೃತ್ಯ ನಿಂತಿಲ್ಲ. ಕಳೆದ ಹಲವಾರು ವರ್ಷಗಳಿಂದ ಮೀನುಗಳನ್ನು ಕದ್ದು ಸಾಗಿಸುತ್ತಿರುವವರನ್ನು ಪತ್ತೆಹಚ್ಚಿ ಬಂಧಿಸುವಂತೆ ಸ್ಥಳೀಯರು ಒತ್ತಾಯಿಸುತ್ತಾ ಬಂದಿದ್ದರೂ ಪ್ರಯೋಜವಾಗಿಲ್ಲ. ಹಲವು ಸಲ ಮೀನುಗಳನ್ನು ಕದಿಯಲು ಬಂದಿದ್ದ ಕಳ್ಳರು ಅಲ್ಲಿಯೇ ಬಿಟ್ಟು ಹೋಗಿದ್ದ ಭಾರೀ ಗಾತ್ರದ ಮೀನು ಅಸುನೀಗುತ್ತಿವೆ. ಸ್ಥಳೀಯರು ಸತ್ತ ಮೀನು ಹೊತ್ತು ರಾಮನಾಥಪುರದಲ್ಲಿ ಪ್ರತಿಭಟನೆ ನಡೆಸುವ ಮೂಲಕ ಮೀನುಗಳಿಗೆ ರಕ್ಷಣೆ ನೀಡುವಂತೆ ಆಗ್ರಹಿಸಿದ್ದರು.

**ಸಾರ್ವಜನಿಕರಿಂದ ಹೆಚ್ಚಿದ ಆಗ್ರಹ**

ಬೇಸಿಗೆ ಸಮಯದಲ್ಲಿ ನೀರು ನಿಲ್ಲುವಂತೆ ಸೂಕ್ತ ತಡೆಗೋಡೆ ಹಾಕಿ ಮರಳು ಮೂಟೆ ಕಟ್ಟದೆ ವಹ್ನಿ ಪುಷ್ಕರಣಿಯಲ್ಲಿರುವ ಅಪಾರ ಮೀನುಗಳು ಹೊರ ಹೋಗುತ್ತಿವೆ. ಸಿಸಿಟಿವಿ ಕ್ಯಾಮರಾ ಇಲ್ಲದ ಕಾರಣ ನೀರು ಕಡಿಮೆಯಾಗಿರುವ ಅವಕಾಶ ಕಾದು ಕಳ್ಳರು ಕೂಡ ರಾತ್ರಿ ವೇಳೆ ರಾಜಾರೋಷವಾಗಿ ಭಾರೀ ಗಾತ್ರದ ಮೀನುಗಳನ್ನು ಕದಿಯುವ ಕೃತ್ಯಕ್ಕೆ ಕಡಿವಾಣ ಬಿದ್ದಿಲ್ಲ. ಪರಿಣಾಮವಾಗಿ ದೇವರ ಪ್ರತಿರೂಪವೆಂದು ಭಕ್ತರು ನಂಬಿರುವ ಮತ್ಸ್ಯ ರಾಶಿಗಳ ಜೀವಕ್ಕೆ ಬೆಲೆಯೇ ಇಲ್ಲವಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದರು. ಮಾತ್ರವಲ್ಲದೆ ಮರಳು ಮೂಟೆ ಅಳವಡಿಸುವಂತೆ ಒತ್ತಾಯಿಸಿದ್ದರು.

ರಾತ್ರಿ ವೇಳೆ ಕಾವಲುಗಾರರನ್ನು ನೇಮಿಸಬೇಕು. ವಹ್ನಿ ಪುಷ್ಕರಣಿಗೆ ಫೋಕಸ್ ಲೈಟ್ ಹಾಗು ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು. ಮೀನುಗಾರಿಕೆ ಇಲಾಖೆ ಮೀನಾಮೇಷ ಎಣಿಸದೆ ವಹ್ನಿ ಪುಷ್ಕರಣಿಯಲ್ಲಿರುವ ಮೀನುಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.


**ಮತ್ಸ್ಯ ನೋಡಲು ಜನಸಾಗರ**

ಶ್ರೀ ರಾಮೇಶ್ವರ ದೇವಸ್ಥಾನ ಸನ್ನಿಧಿಯಲ್ಲಿ ಹರಿಯುವ ಕಾವೇರಿ ನದಿಯ ವಹ್ನಿ ಪುಷ್ಕರಣಿಯಲ್ಲಿ ಸಾವಿರಾರು ಮೀನುಗಳು ನೆಲೆಸಿವೆ. ಅಂದ ಚಂದದ ಗಾತ್ರದಲ್ಲಿರುವ ಮೀನುಗಳನ್ನು ನೋಡಿ ಆನಂದಿಸಲು ಅಪಾರ ಭಕ್ತರು ಭೇಟಿ ನೀಡಿ ಕಣ್ತುಂಬಿಕೊಳ್ಳುತ್ತಿದ್ದಾರೆ. ಇದೀಗ ಕಳೆದೊಂದು ತಿಂಗಳಿನಿಂದ ನಡೆಯುತ್ತಿರುವ ಪ್ರಸನ್ನ ಸುಬ್ರಹ್ಮಣ್ಯಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿರುವ ಭಕ್ತರು ಮೀನುಗಳನ್ನು ನೋಡಲು ತಂಡೋಪತಂಡವಾಗಿ ಆಗಮಿಸುತ್ತಿದ್ದು, ಜಾತ್ರೆಯ ಸಂಭ್ರಮವನ್ನು ಸಾಕ್ಷೀಕರಿಸುತ್ತಿದೆ.

ಪ್ರತಿನಿತ್ಯ ಜಾತ್ರೆಗೆ ಬರುವ ಸಹಸ್ರಾರು ಭಕ್ತರು ಕಾವೇರಿ ನದಿಯಲ್ಲಿ ಮಿಂದು ದೇವಸ್ಥಾನದಲ್ಲಿ ಪೂಜಾ ಕಾರ್ಯಗಳನ್ನು ಪೂರೈಸಿದ ನಂತರ ವಹ್ನಿ ಪುಷ್ಕರಣಿಗೆ ಭೇಟಿ ನೀಡದೆ ಹಿಂದಿರುಗುವುದಿಲ್ಲ. ವಹ್ನಿ ಪುಷ್ಕರಣಿ ತಟದಲ್ಲಿ ಮೀನುಗಳಿಗೆ ಕಡಲೆಕಾಯಿ ಕುರುಕಲು ತಿಂಡಿಗಳನ್ನು ಆಹಾರವಾಗಿ ಎಸೆಯುತ್ತಿದ್ದು, ಒಂದರ ಮೇಲೊಂದು ಮೇಲೆದ್ದು ಈಜುವ ಮೀನುಗಳ ಕಲವರ ಕಣ್ಮನ ತಣಿಸುತ್ತಿದೆ.

# ಶಾಲೆಗಳಲ್ಲಿ ಏನನ್ನು ಬೋಧಿಸಬೇಕು?

ಭಗವದ್ಗೀತೆ-ಸನಾತನ ಹಿಂದೂಗಳ ಧರ್ಮ ಗ್ರಂಥ, ಕುರಾನ್-ಇಸ್ಲಾಮಿಯರ ಧರ್ಮ ಗ್ರಂಥ, ಬೈಬಲ್-ಕ್ರಿಶ್ಚಿಯನ್ನರ ಧರ್ಮ ಗ್ರಂಥ, ಗ್ರಂಥಾ ಸಾಹಿಬ್-ಸಿಖ್ಖರ ಧರ್ಮ ಗ್ರಂಥ, ಬುದ್ಧ ತತ್ವಗಳು-ಬೌದ್ಧರ ಧರ್ಮ ಗ್ರಂಥ, 24 ತೀರ್ಥಂಕರರ ಸಂದೇಶಗಳು-ಜೈನರ ಧರ್ಮ ಗ್ರಂಥ, ವಚನಗಳು-ಲಿಂಗಾಯಿತರ ಧರ್ಮ ಗ್ರಂಥ, ಮಾರ್ಕ್ಸ್‌ವಾದ-ಕಮ್ಯುನಿಷ್ಟರ ಧರ್ಮ ಗ್ರಂಥ, ದ್ವೈತ-ಅದ್ವೈತ-ವಿಶಿಷ್ಟಾದ್ವೈತ ಚಿಂತನೆಗಳು-ವೇದ ಉಪನಿಷತ್-ಮನಸ್ಮೃತಿಗಳು-ಬ್ರಾಹ್ಮಣರ ಧರ್ಮ ಗ್ರಂಥಗಳು. ಸಂವಿಧಾನ-ಭಾರತೀಯ ನಾಗರೀಕರ ಸ್ವಾತಂತ್ರ್ಯ, ಸಮಾನತೆ, ಹಕ್ಕು ಮತ್ತು ಕರ್ತವ್ಯಗಳ ನೀತಿ ನಿಯಮಗಳ ಗ್ರಂಥ.




ಈಗ ಹೇಳಿ ಮಕ್ಕಳಿಗೆ ಶಾಲೆಗಳಲ್ಲಿ ಯಾವುದನ್ನು ಬೋಧಿಸಬೇಕು, ದೇವಸ್ಥಾನಗಳಲ್ಲಿ ಯಾವುದನ್ನು ಹೇಳಿಕೊಡಬೇಕು, ಮಠಮಾನ್ಯಗಳಲ್ಲಿ ಯಾವುದರ ತಿಳಿವಳಿಕೆ ಮೂಡಿಸಬೇಕು, ಮಸೀದಿಗಳಲ್ಲಿ ಯಾವುದರ ಅರಿವು ಉಂಟು ಮಾಡಿಸಬೇಕು, ಮದರಸಾಗಳಲ್ಲಿ ಯಾವುದರ ಬಗ್ಗೆ ಜಾಗೃತಿ ಕೊಡಬೇಕು, ಚರ್ಚ್‌ಗಳಲ್ಲಿ ಯಾವುದು ಹೇಳಿಕೊಡಬೇಕು, ಮಿಷನರಿಗಳಲ್ಲಿ ಯಾವುದು ಕಲಿಸಬೇಕು, ಗುರುದ್ವಾರಗಳಲ್ಲಿ, ಬೌದ್ಧ, ಜೈನಮಂದಿರಗಳಲ್ಲಿ, ಯಾವುದನ್ನು ಹೇಳಿಕೊಡಬೇಕು?

ನಾವು ಯಾರಿಗೂ ಮೋಸ ಮಾಡಬಾರದು. ನಾವು ಯಾರ ಮೇಲೆಯೂ ದೌರ್ಜನ್ಯ ಅಥವಾ ಶೋಷಣೆ ಮಾಡಬಾರದು, ನಮ್ಮದಲ್ಲದ ವಸ್ತು, ಆಸ್ತಿ, ಹಣ, ಆಭರಣಗಳಿಗೆ ದುರಾಸೆ ಪಡಬಾರದು. ನಾವು ಯಾವ ಕಾರಣಕ್ಕೂ ಭ್ರಷ್ಟಾಚಾರ ಮಾಡಬಾರದು, ಲಂಚದ ಹಣಕ್ಕೆ ಕೈ ಚಾಚಬಾರದು. ನಾವು ಯಾವುದೇ ವ್ಯಕ್ತಿಯನ್ನು ಆತನ ಹುಟ್ಟಿನ ಕಾರಣಕ್ಕಾಗಿ, ಆತನ ದೈಹಿಕ ರಚನೆಯ ಕಾರಣಕ್ಕಾಗಿ ಕೀಳಾಗಿ ಕಾಣಬಾರದು. ಎಲ್ಲರೂ ನಮ್ಮವರೇ. ಪರಸ್ತ್ರೀ ಅಥವಾ ಪರಪುರುಷನನ್ನು ಅವರ ಇಷ್ಟಕ್ಕೆ ವಿರುದ್ಧವಾಗಿ ಮೋಹಿಸಬಾರದು, ಕಾಮಿಸಬಾರದು.

ನಮ್ಮ ಸೃಷ್ಟಿಯಲ್ಲಿ ಯಾವ ರೀತಿಯಲ್ಲೂ ಪರಿಸರವನ್ನು ನಾಶ ಮಾಡಬಾರದು. ಅದನ್ನು ಗೌರವಿಸಿ ಉಳಿಸಬೇಕು. ಮಾನವೀಯ ಮೌಲ್ಯಗಳು ಮತ್ತು ನಾಗರಿಕ ಪ್ರಜ್ಞೆ ಯನ್ನು ಸದಾ ನಮ್ಮ ನಡವಳಿಕೆಯಲ್ಲಿ ಅಳವಡಿಸಿಕೊಳ್ಳಬೇಕು. ಜಾತಿ, ಧರ್ಮ, ಭಾಷೆ, ಪ್ರದೇಶಗಳ ಆಧಾರದ ಮೇಲೆ ಯಾವುದೇ ರೀತಿಯ ಹಿಂಸೆ ಮಾಡಬಾರದು. ಕೊಲೆ, ಅತ್ಯಾಚಾರ, ಹಿಂಸೆ ಮುಂತಾದವನ್ನು ಯಾವ ಕಾರಣಕ್ಕೂ ಮಾಡಬಾರದು. ಶಾಲಾ ಕಾಲೇಜುಗಳಲ್ಲಿ ಕಾಪಿ ಮಾಡಬಾರದು.

ಸಮಾಜದಲ್ಲಿ ರೂಪಿತವಾಗಿರುವ ಎಲ್ಲಾ ನೀತಿ ನಿಯಮಗಳನ್ನು ಅನುಸರಿಸಬೇಕು. ನಿಯಮ ಉಲ್ಲಂಘನೆ ಮಾಡಬಾರದು. ನಾವೂ ಬದುಕಬೇಕು ಇತರರನ್ನೂ ಬದುಕಲು ಬಿಡಬೇಕು. ಚುನಾವಣೆಗಳಲ್ಲಿ ಅಕ್ರಮವಾಗಿ ಹಣ, ಹೆಂಡ, ಸೀರೆ, ಪಂಚೆ ಹಂಚಬಾರದು. ಜನರ ಮಧ್ಯೆ ದ್ವೇಷ ಬಿತ್ತಬಾರದು. ಚುನಾವಣೆಯಲ್ಲಿ ಗೆದ್ದ ಮೇಲೆ ಪ್ರಾಮಾಣಿಕವಾಗಿ ಸಮಾಜ ಸೇವೆ ಮಾಡಬೇಕು. ಧಾರ್ಮಿಕ ಕೆಲಸ ಮಾಡುವಾಗ ಎಲ್ಲಾ ರೀತಿಯ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ಸರ್ವಸಂಗ ಪರಿತ್ಯಾಗಿಗಳಾಗಿ ಸೇವೆ ಮಾಡಬೇಕು.

ಯಾವುದೇ ವೃತ್ತಿಯಲ್ಲಿದ್ದರೂ ಆ ವೃತ್ತಿಗೆ ಅಪಚಾರವಾಗದಂತೆ ಕರ್ತವ್ಯ ನಿರ್ವಹಿಸಬೇಕು. ಬದುಕೊಂದು ತಾತ್ಕಾಲಿಕ ನಿಲ್ದಾಣ. ಮನುಷ್ಯನ ಸರಾಸರಿ ಆಯಸ್ಸು ಸುಮಾರು 60 ರಿಂದ 80. ಯಾರೂ ಇಲ್ಲಿ ಶಾಶ್ವತವಲ್ಲ.

ಇಂತಹ ಜೀವನದ ಅವಧಿಯಲ್ಲಿ ನಾವು ಯಾವುದೇ ಕಷ್ಟ ನಷ್ಟಗಳು ಬಂದರೂ ಸಾಧ್ಯ ವಾದಷ್ಟು ಸ್ಥಿತಪ್ರಜ್ಞತೆಯನ್ನು ಕಾಪಾಡಿಕೊಳ್ಳಬೇಕು.... ಹೀಗೆ ಅನೇಕ ಅಂಶಗಳನ್ನು ಹೇಳಿಕೊಡುವುದಕ್ಕೆ ಯಾವ ಧರ್ಮ ಗ್ರಂಥ ಒಳ್ಳೆಯದು ದಯವಿಟ್ಟು ತಿಳಿಸಿ.

ಈ ಜಗತ್ತನ್ನು ಸೃಷ್ಟಿಸಿದ್ದು ನಮ್ಮದೇ ದೇವರು. ಆ ದೇವರು ಬೋಧಿಸಿರುವ ಧರ್ಮ ಮಾರ್ಗಗಳು ಸರಿಸುಮಾರು ಕೆಳಗಿನ ಇದೇ ರೀತಿ ಇವೆ. ನಮ್ಮ ಧರ್ಮವೇ ಶ್ರೇಷ್ಠ. ಇಡೀ ಜಗತ್ತಿನಲ್ಲಿ ನಮ್ಮ ಧರ್ಮದ ಅನು ಯಾಯಿಗಳು ಮಾತ್ರವೇ ಇರಬೇಕೆಂಬ ಸಂದೇಶ ರವಾನಿಸಿ. ನಿಮ್ಮನ್ನು ಸೃಷ್ಟಿಸಿರುವುದು ಆ ದೇವರು. ನಿಮ್ಮ ಬದುಕಿನ ಸಾರ್ಥಕತೆ, ಮೋಕ್ಷ ಅಡಗಿರುವುದೇ ಆ ದೇವರ ಸೇವೆಯಲ್ಲಿ. ಆ ದೇವರು ಈ ಜನ್ಮ, ಹಿಂದಿನ ಜನ್ಮ, ಮುಂದಿನ ಜನ್ಮ ಸೇರಿ ಎಲ್ಲಾ ಜನ್ಮಗಳಲ್ಲೂ ನಿಮ್ಮನ್ನು ಕಾಪಾಡುತ್ತಾನೆ. ನೀವು ದೇವರನ್ನು ಎಷ್ಟು ಪೂಜಿಸುತ್ತೀರೋ ಅಷ್ಟರಮಟ್ಟಿಗೆ ದೇವರು ತೃಪ್ತಿ ಹೊಂದಿ ನಿಮ್ಮನ್ನು ಕಾಪಾಡು ತ್ತಾನೆ. ನಿಮ್ಮೆಲ್ಲಾ ಕಷ್ಟಗಳಿಂದ ರಕ್ಷಿಸುತ್ತಾನೆ.

ನಿಮ್ಮ ಕೆಲಸ ನೀವು ಮಾಡಿ ಪ್ರತಿಫಲವನ್ನು ಆ ದೇವರಿಗೆ ಬಿಡಿ. ದೇವರಿಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲುಗಾಡುವುದಿಲ್ಲ. ನಿಮ್ಮೆಲ್ಲಾ ನೋವು ನಲಿವುಗಳಿಗೆ ಆ ದೇವರೇ ಕಾರಣ. ಉಳಿದದ್ದು ನಿಮ್ಮ ಕರ್ಮಫಲ. ಎಲ್ಲವನ್ನೂ ದೇವರಿಗೆ ಅರ್ಪಿಸಿ. ಅವನು ಸರ್ವಾಂತರ್ಯಾಮಿ ಸರ್ವವ್ಯಾಪಿ, ಸರ್ವ ಶಕ್ತ. ಇಲ್ಲಿ ನಿಮ್ಮದೇನು ಇಲ್ಲ. ದೇವರ ಮೇಲೆ ನಂಬಿಕೆ ಇಟ್ಟು ಪ್ರತಿದಿನ ದೇವರ ಸ್ಮರಣೆಯಲ್ಲಿ ಇದ್ದರೆ ನಿಮ್ಮ ಜೀವನ ಪವಿತ್ರವಾಗುವುದು. ದೇವರ ಭಜನೆಯಿಂದ ನಿಮ್ಮ ಜೀವನ ಪಾವನವಾಗುವುದು.

ಪ್ರತಿ ವರ್ಷ ದೇವರ ಪವಿತ್ರ ಕ್ಷೇತ್ರಗಳ ತೀರ್ಥಯಾತ್ರೆಯನ್ನು ಮಾಡಿ. ಪ್ರತಿ ವರ್ಷ ಪವಿತ್ರ ನದಿಯಲ್ಲಿ ಮುಳುಗೇಳಿ. ಪ್ರತಿ ವರ್ಷ ಉಪವಾಸ ಮಾಡಿ. ಪ್ರತಿ ದಿನ ಪ್ರಾರ್ಥನೆ. ಮಾಡಿ. ನಿಮ್ಮೆಲ್ಲ ಹಿತಚಿಂತಕ ಆ ದೇವರು. ಅದೂ ನಮ್ಮ ದೇವರು ಮಾತ್ರ. ಆ ದೇವರು ಸೃಷ್ಟಿಸಿರುವುದೇ ಈ ನಮ್ಮ ಧರ್ಮ. ಆದ್ದರಿಂದ ನಮ್ಮ ಧರ್ಮವೇ ಜಗತ್ತಿನ ಅತ್ಯಂತ ಶ್ರೇಷ್ಠವಾದದ್ದು, ವಿಶಾಲವಾದದ್ದು, ಅರ್ಥ ಪೂರ್ಣವಾದದ್ದು. ಆದ್ದರಿಂದ ಇದೆಲ್ಲವನ್ನು ನಮ್ಮ ಧರ್ಮ ಗ್ರಂಥಗಳಲ್ಲಿ ಹೇಳಲಾಗಿದೆ. ಇದನ್ನೇ ಎಲ್ಲರೂ ಅರ್ಥ ಮಾಡಿಕೊಂಡು ಬದುಕಿ.

**ಧರ್ಮೋ ರಕ್ಷತಿ ರಕ್ಷಿತ:** ಧರ್ಮ ರಕ್ಷಣೆಗಾಗಿ ಅಧರ್ಮಿಗಳನ್ನು ಕೊಲ್ಲಲು ಹಿಂಜರಿಯ ಬೇಡಿ. ಧರ್ಮ ರಕ್ಷಣೆಗಾಗಿ ಹಿಂಸೆ ಅನಿವಾರ್ಯ. ಇದು ಬಹುತೇಕ ಧರ್ಮಗಳ ಉವಾಚ. ಈಗ ಹೇಳಿ ಯಾವುದನ್ನು ಹೇಳಿ ಕೊಡಬೇಕು, ಯಾವುದರಿಂದ ಕಲಿಯಬೇಕು?

ನಮ್ಮ ಬೆನ್ನ ಹಿಂದೆ ಅಂದರೆ ಇತಿಹಾಸದಲ್ಲಿ ಕನಿಷ್ಠವೆಂದರೂ ಆಧುನಿಕ ನಾಗರೀಕ ಸಮಾಜದ ಸುಮಾರು ಮೂರು ಸಾವಿರ ವರ್ಷಗಳ ಅನುಭವ ಇದೆ. ಜೊತೆಗೆ ತುಂಬಾ ಸ್ಪಷ್ಟವಾಗಿ ಸುಮಾರು 100/200 ವರ್ಷಗಳ ಇತಿಹಾಸ ದಾಖಲೆಗಳ ಸಮೇತ ಬರೆಯ ಲ್ಪಟ್ಟಿದೆ. ಈಗಿನ ವರ್ತಮಾನದ ಘಟನೆಗಳಿಗೂ ನಾವು ಸಾಕ್ಷಿಯಾಗಿದ್ದೇವೆ. ಇಷ್ಟೆಲ್ಲಾ ಆದ ನಂತರವೂ ಶತಮಾನಗಳ ಹಿಂದೆ ರಚಿತವಾದ ಧರ್ಮ ಗ್ರಂಥಗಳು ಮುಖ್ಯವಾಗಬೇಕೇ ಅಥವಾ ಈ ಎಲ್ಲದರ ಸಾರವಾದ ಮಾನವ ಸಮಾನತೆ, ಸ್ವಾತಂತ್ರ್ಯ, ಕಲ್ಯಾಣಕ್ಕಾಗಿ ನಾವೇ ರಚಿಸಿಕೊಂಡ ನೀತಿ ನಿಯಮಗಳ ಸಂವಿಧಾನ ಮುಖ್ಯವಾಗಬೇಕೇ, ಆಯ್ಕೆ ನಮ್ಮ ಮುಂದಿದೆ.

ಕೇವಲ ಭಾರತದ ಆಂತರಿಕ ವಿಷಯವನ್ನೇ ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಸಾವಿರದ ಒಂಬೈನೂರ ಐವತ್ತಕ್ಕಿಂತ ಮೊದಲು ಇಡೀ ದೇಶದಲ್ಲಿ ರಾಜಪ್ರಭುತ್ವ, ಮೊಘಲರ ಆಡಳಿತ, ಬ್ರಿಟಿಷರ ಆಡಳಿತ ವ್ಯವಸ್ಥೆ ಇದ್ದಿತು. ಇಲ್ಲಿ ಬಹುತೇಕ ಸಾಮಾನ್ಯ ಜನ ಗುಲಾಮರು, ಶೋಷಿತರು, ನ್ಯಾಯ ವಂಚಿತರು ಆಗಿದ್ದರು. 1950ರ ನಂತರವೇ ಒಂದಷ್ಟು ಸ್ವಾತಂತ್ರ್ಯ, ಒಂದಷ್ಟು ಸಮಾನತೆ, ಒಂದಷ್ಟು ರಕ್ಷಣೆ ನಮಗೆ ದೊರೆತಿದೆ. ಈಗಲೂ ಶೋಷಣೆ, ದೌರ್ಜನ್ಯ ಇದ್ದರೂ ಸಹ ಕನಿಷ್ಠ ಅದರ ವಿರುದ್ಧ ಪ್ರತಿಭಟಿಸಲು ಅವಕಾಶಗಳಿವೆ. ಮತ್ತೆ ಯೋಚಿಸಿ ನೋಡಿ ಧರ್ಮ, ಧರ್ಮ ಗ್ರಂಥ, ದೇವರುಗಳ ಆಳ್ವಿಕೆ ಕಾಲವು ಉತ್ತಮವೋ ಅಥವಾ ಈ ಪ್ರಜಾಪ್ರಭುತ್ವ ಕಾಲ ಉತ್ತಮವೋ?

ಒಳ್ಳೆಯದನ್ನೇ ಹೇಳಿ ಕೊಡೋಣ. ಆದರೆ ಹೇಗೆ ? ಭಗವದ್ಗೀತೆ, ಕುರಾನ್, ಬೈಬಲ್ ಅಥವಾ ಇತರ ಧರ್ಮ ಗ್ರಂಥಗಳು ಹೇಳಿರುವುದು ಒಳ್ಳೆಯದೇನೋ ನಿಜ, ಆದರೆ ಇಂದು ಮನಸ್ಸುಗಳು ಸಂಪೂರ್ಣ ಒಡೆದು ಹೋಗಿವೆ. ಜನರು ಯಾವುದೋ ಒಂದು ಧಾರ್ಮಿಕ ಗ್ರಂಥಕ್ಕೆ ಅಡಿಯಾಳುಗಳಾಗಿದ್ದಾರೆ. ಈಗ ಅದನ್ನು ಮತ್ತೆ ಪ್ರಸ್ತಾಪಿಸಿದರೆ ದ್ವೇಷಗಳು ಹೆಚ್ಚಾಗಬಹುದು. ಹಿಂದೆ ಎಲ್ಲರಿಗೂ ಭಗವದ್ಗೀತೆ, ಕುರಾನ್, ಬೈಬಲ್ ಹೇಳಿ ಕೊಡಲಾಗುತ್ತಿತ್ತು. ಆದರೆ ಆ ಎಲ್ಲವನ್ನು ಒಟ್ಟು ಮಾಡಿ ಅದರ ಆಧಾರದ ಮೇಲೆ ಸಂವಿಧಾನ ರಚಿಸಲಾಗಿದೆ. ಜೊತೆಗೆ ಆಂತರಿಕ ಶುದ್ಧತೆಗೆ ಅಥವಾ ಆಂತರಿಕ ಸಮಸ್ಯೆಗೆ ಸಮಾಜ, ವೈದ್ಯಕೀಯ ಲೋಕ ಸಾಕಷ್ಟು ಪ್ರಯತ್ನ ಮಾಡುತ್ತಿದೆ. ಕಷ್ಟ ನಷ್ಟಗಳಿಗೆ ಸ್ನೇಹಿತರು ಬಂಧು ಬಳಗ ಎಲ್ಲರೂ ಇದ್ದಾರೆ. ಆದ್ದರಿಂದ ಧರ್ಮ ಗ್ರಂಥಗಳಿಗಿಂತ ಸಾಮಾನ್ಯ ಜ್ಞಾನದ ಸಾಮಾನ್ಯ ಅರಿವೇ ಸಾಕಾಗುತ್ತದೆ.

ಅದು ವಚನಗಳೇ ಇರಲಿ, ಬುದ್ಧ ಸಂದೇಶಗಳೇ ಇರಲಿ, ತೀರ್ಥಂಕರರ ತತ್ವಗಳೇ ಇರಲಿ ಯಾವುದು ಅತಿಯಾಗದೆ, ಮೂಲಭೂತವಾಗದೆ, ಮಾನವನ ನಾಗರೀಕ ಪ್ರಜ್ಞೆ ಮೇಲುಗೈ ಪಡೆದರೆ ಮಾತ್ರ ಸಮಾಜದ ಅಸ್ತಿತ್ವಕ್ಕೆ ಧಕ್ಕೆ ಆಗುವುದಿಲ್ಲ. ಇಲ್ಲದಿದ್ದರೆ ಯಾವುದೋ ಒಂದಕ್ಕೆ ಕಟ್ಟು ಬಿದ್ದರೆ ಸಮಾಜದ ಅಸ್ವಸ್ಥತೆ ಉಂಟಾಗುತ್ತದೆ. ರಕ್ತಪಾತಗಳಾಗುತ್ತದೆ. ಆಯ್ಕೆ ನಮ್ಮ ಮುಂದಿದೆ. ಬದಲಾವಣೆ ಜಗದ ನಿಯಮ. ಕೆಲವು ಧರ್ಮ ಗಳು ಬದಲಾವಣೆ ಒಪ್ಪುವುದಿಲ್ಲ. ಆದರೆ ಸಂವಿಧಾನದಲ್ಲಿ ಕಾಲಕ್ಕೆ ತಕ್ಕಂತೆ ತಿದ್ದುಪಡಿಗೆ ಅವಕಾಶವಿದೆ.

## ಒಂದು ಒಳ್ಳೆಯ ನುಡಿ



ನಾವು ಯಾವುದೇ ತೀರ್ಮಾನಕ್ಕೆ ಬರಬೇಕಾದರೂ ಬಹಳ ಆಲೋಚಿಸಬೇಕು. ಒಬ್ಬರತ್ತ ಬೆರಳು ತೋರಿಸಿ ಮಾತನಾಡುವುದು ಕಷ್ಟವಲ್ಲ, ಅದರ ಪರಿಣಾಮವನ್ನು ಊಹಿಸಿದರೆ ಬಲು ಘೋರ. ಸತ್ಯವಾದರೆ ಸರಿ. ಸುಳ್ಳಾದರೆ ಉಸಿರಿಗೆ ಕುತ್ತು ಬರಬಹುದು. ಅಪವಾದ ಸಲ್ಲದು. ಬಹು ಎಚ್ಚರಿಕೆಯಿಂದ ಹೆಜ್ಜೆಯೂರಬೇಕು.

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಜಲಂ ಪಿಬೇತ್
ಸತ್ಯಪೂತಾಂ ವದೇದ್ವಾಚಂ ಮನ:ಪೂತಂ ಸಮಾಚರೇತ್

ನೀರನ್ನು ಹಾಗೆಯೇ ಕುಡಿದರೆ ಇಲ್ಲ ಸಲ್ಲದ ರೋಗ ಬರಬಹುದು. ವಸ್ತ್ರದಿಂದಲೋ ಜಾಲರಿಯಿಂದಲೋ ಶೋಧಿಸಿ ಕುಡಿಯಬೇಕು. ಸತ್ಯ, ಶುದ್ಧವಾದ ಮಾತುಗಳನ್ನಾಡಬೇಕು. ಪರಾ ಮರ್ಶೆ ಬೇಕು, ಚಿಂತನ-ಮಂಥನವಿರಬೇಕು. ಅಂತರಂಗದಿಂದ ಕೆಲಸಮಾಡಿ ಪಾವಿತ್ರ್ಯತೆ ಯನ್ನು ಕಾಪಾಡಿಕೊಳ್ಳುವುದು ಮನುಷ್ಯ ಧರ್ಮ. ಅನ್ಯಾಯದ್ದು ಬೇಡವೇ ಬೇಡ. ಧರ್ಮ ಮತ್ತು ಕೀರ್ತಿ, ಕೈಗೊಳ್ಳುವ ಉತ್ತಮ ಕೆಲಸಕಾರ್ಯಗಳು ಮಾತ್ರ ಶಾಶ್ವತ ಎನ್ನುವ ಅರಿವು ನಮ್ಮಲ್ಲಿರಲಿ. ಪ್ರತಿಯೊಂದು ವನದಲ್ಲೂ ಪರಿಮಳ ಭರಿತವಾದ ಮರಗಳಿರಲು ಸಾಧ್ಯವೇ? ಹಾಗೆಯೇ ಒಳ್ಳೆಯ ಸಾಧು ಸಜ್ಜನರಾದ ಮನುಷ್ಯರು ಎಲ್ಲಾ ಕಡೆಯಲ್ಲಿ ಕಾಣಸಿಗರು. ಜೀವನ ದಲ್ಲಿ ಬರುವ ಕಷ್ಟಗಳನ್ನು ಎದುರಿಸುವ ಶಕ್ತಿ ಕೊಡು ಭಗವಂತ ಎಂದು ಕೇಳಿಕೊಳ್ಳೋಣ.

**-ರತ್ನಾ ಕೆ.ಭಟ್, ತಲಂಜೇರಿ**

# ಮರೆಯಲಾಗದ ಎಸ್.ಆರ್.ಮಲ್ಯ

ದಿವಂಗತ ಎಸ್.ರಾಮಚಂದ್ರ ಮಲ್ಯರನ್ನು ಮೊದಲ ಬಾರಿ ಭೇಟಿಯಾ ದದ್ದು ಮಂಗಳೂರಿನ ಬಲ್ಮಠದ ಕಾರ್ಪೊರೇಷನ್ ಬ್ಯಾಂಕಿನ ಸಿಬ್ಬಂದಿ ತರಬೇತಿ ಕಾಲೇಜಿನಲ್ಲಿ. ಅವರು ಅದರ ಪ್ರಿನ್ಸಿಪಾಲ್ ನಾನು ಅಲ್ಲಿಗೆ ಪ್ರಾಧ್ಯಾಪಕ ನಾಗಿ ಸೇರಿಕೊಂಡಿದ್ದೆ.

ಹಾಗೆ ಶುರುವಾದ ನಮ್ಮ ಆತ್ಮೀಯ ಸಂಬಂಧ ಸುಮಾರು ಮೂರು ದಶಕಗಳ ಕಾಲ ಮುಂದುವರಿಯಿತು. ಅವರು ನನ್ನ ಮೇಲಾಧಿಕಾರಿ ಎಂಬುದಕ್ಕಿಂತ, ಸಮಾನ ಚಿಂತಕರು, ಆಪ್ತರು ಹಾಗೂ ಅಭಿಮಾನಿ ಎಂಬ ನೆಲೆಗಳಲ್ಲಿ ನಮ್ಮ ಸಂಬಂಧ ಗಟ್ಟಿಯಾಯಿತು.

ಎಸ್.ಆರ್.ಮಲ್ಯರೆಂದೇ ಜನಪ್ರಿಯರಾಗಿದ್ದ ಅವರು ಸದಾ ಅಧ್ಯಯನ ಶೀಲರು. ಅವರ ಪಕ್ಕದಲ್ಲಿ ಯಾವಾಗಲೂ ಕೆಲವು ಆಯ್ದ ಪುಸ್ತಕಗಳು. ಹಾಳುಹರಟೆಯಲ್ಲಿ ಅವರಿಗೆ ಆಸಕ್ತಿಯಿಲ್ಲ, ಬದಲಾಗಿ ಉತ್ತಮ ಓದಿನಲ್ಲೇ ಆಸಕ್ತಿ. ಅದರಿಂದಾಗಿಯೇ ಅವರ ಮಾತುಗಳು ಯಾವತ್ತೂ ಸಕಾರಾತ್ಮಕ ಮತ್ತು ಇತರರಿಗೆ ಪ್ರೋತ್ಸಾಹ ದಾಯಕ.

ಅವರು ಕೆನರಾ ಬ್ಯಾಂಕಿನ ಸಿಬ್ಬಂದಿ ತರಬೇತಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ ಒಮ್ಮೆ ಅಕಸ್ಮಾತ್ ಸ್ವಾಮಿ ಚಿನ್ಮಯಾನಂದರ ಪ್ರವಚನ ಕೇಳಲು ಹೋಗಿದ್ದರು. ಅವರ ಪ್ರವಚನ, ಅವರು ಭಗವದ್ಗೀತೆಯ ತಾತ್ಪರ್ಯ ವಿವರಿಸುತ್ತಿದ್ದ ಪರಿ, ಅವರ ಮಾತುಗಾರಿಕೆ ಹಾಗೂ ವ್ಯಕ್ತಿತ್ವದಿಂದ ಪ್ರಭಾವಿತರಾದ ಎಸ್.ಆರ್. ಮಲ್ಯರು ಆ ಕ್ಷಣದಿಂದಲೇ ಸ್ವಾಮಿ ಚಿನ್ಮಯಾನಂದರ ಶಿಷ್ಯರಾದರು. ಅವರಿಬ್ಬರದು ಗುರು-ಶಿಷ್ಯರ ಸಂಬಂಧಕ್ಕಿಂತ ಮಿಗಿ ಲಾಗಿ ಆತ್ಮಬಂಧುಗಳ ಸಂಬಂಧ ವಾಗಿತ್ತು.

ಎಸ್.ಆರ್.ಮಲ್ಯರು ಸ್ವಾಮಿ ರಜನೀಶ್ (ಓಶೋ) ಅವರಿಂದಲೂ ಪ್ರಭಾವಿತರಾಗಿದ್ದರು. ಸ್ವಾಮಿ ರಜನೀಶರ ಹಲವು ಪುಸ್ತಕಗಳನ್ನು ಓದಿದ್ದರು ಮತ್ತು ಅವರ ಎಲ್ಲ ಪ್ರವಚನಗಳ ವಿಡಿಯೋ ತರಿಸಿಕೊಂಡು ಆಗಾಗ ಕೇಳುತ್ತಿದ್ದರು.

**ಮಾತುಗಾರಿಕೆಯ ಮೋಡಿ**

ತಮ್ಮ ಮಾತುಗಾರಿಕೆಯಿಂದ ಯಾರದೇ ಮನ ಗೆಲ್ಲಬಲ್ಲವರಾಗಿದ್ದರು ಎಸ್.ಆರ್. ಮಲ್ಯ. ಅವರ ನಿರರ್ಗಳ ಮಾತು, ಪದಗಳನ್ನು ಕುಣಿಸುವ ಪರಿ, ಹಾವಭಾವ, ಕೇಳುಗರತ್ತ ನೆಟ್ಟ ನೋಟ -ಎಲ್ಲವೂ ಕೇಳುಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದವು. ನಾಣ್ಣುಡಿಗಳು, ಕತೆಗಳು, ಪ್ರಸಂಗಗಳು ತುಂಬಿರುತ್ತಿದ್ದ ಅವರ ಉಪನ್ಯಾಸಗಳನ್ನು ಕೇಳುವುದೇ ಖುಷಿ. ಇಂಗ್ಲಿಷ್, ಹಿಂದಿ, ಕನ್ನಡ, ಕೊಂಕಣಿ-ಈ ನಾಲ್ಕೂ ಭಾಷೆಗಳನ್ನು ಅವರು ದುಡಿಸುತ್ತಿದ್ದ ಪರಿ ಅಸಾಧಾರಣ.

ಎಸ್.ಆರ್.ಮಲ್ಯರು ಉತ್ತಮ ಹಾಡುಗಾರರೂ ಹೌದು. ಅದೊಂದು ತರಬೇತಿ ತಂಡದಲ್ಲಿ ಸುಮಾರು 70 ಭಾಗಿಗಳಿದ್ದರು. ಕ್ಲಾರ್ಕ್ ಆಗಿದ್ದ ಅವರೆಲ್ಲರೂ ಬ್ಯಾಂಕಿನ ಆಫೀಸರ್ ಹುದ್ದೆಗೆ ಭಡ್ತಿಯಾದವರು. ಆ ತಂಡದ ಸಮಾರೋಪ ಸಮಾರಂಭದಲ್ಲಿ ವಿದಾಯದ ಹಾಡೊಂದನ್ನು



ಎಸ್.ಆರ್.ಮಲ್ಯರು ಭಾವುಕ ರಾಗಿ ಹಾಡಿದ್ದು ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ಸಮಯಸ್ಫೂರ್ತಿ ಮತ್ತು ಹಾಸ್ಯ ಎಸ್. ಆರ್. ಮಲ್ಯರ ದೊಡ್ಡ ಕೌಶಲ್ಯಗಳು. ಎಷ್ಟೋ ಸಂಭಾ ಷಣೆ ಹಾಗೂ ಸಂವಾದಗಳಲ್ಲಿ ಅವರ ಸಮಯ ಸ್ಫೂರ್ತಿಯ ಮಾತುಗಳು ಅಲ್ಲಿನ ಸಂದರ್ಭಕ್ಕೆ ಅನಿರೀಕ್ಷಿತ ತಿರುವು ನೀಡುತ್ತಿದ್ದವು. ಅವರ ಹಾಸ್ಯಪ್ರಜ್ಞೆಗೆ ಸಾಟಿಯೇ ಇಲ್ಲ. ಉಪನ್ಯಾಸಗಳಲ್ಲಿ ಅವರಂತೆ ಹಾಸ್ಯ ಉಣಬಡಿಸಬಲ್ಲವರು ವಿರಳ.

ಡಬ್ಬದಲ್ಲಿ ಚಕ್ಕುಲಿ ತುಂಬಿಸುವುದನ್ನು ಕಂಡಿದ್ದೀರಾ? ಡಬ್ಬ ತುಂಬಿದ ನಂತರ ಕುಲುಕಿದರೆ, ಆ ಡಬ್ಬದಲ್ಲಿ ಇನ್ನೂ ಐದಾರು ಚಕ್ಕುಲಿ ಹಾಕಲು ಜಾಗವಾಗು ತ್ತದೆ. ಹಾಸ್ಯವೂ ಹಾಗೆಯೇ. ಮಾತಿನ ನಡುನಡುವೆ ಹಾಸ್ಯ ಬೆರೆಸಿದರೆ, ಇನ್ನಷ್ಟು ವಿಷಯಗಳನ್ನು ಕೇಳುಗರ ತಲೆಯೊಳಗೆ ತುಂಬಲು ಸಾಧ್ಯವಾಗುತ್ತದೆ ಎಂದವರು ಮುಗುಳ್ನಗುತ್ತಾ ಆಗಾಗ ಹೇಳುತ್ತಿದ್ದುದು ಚಂದ.

**ಆದರ್ಶ ಪ್ರಾಧ್ಯಾಪಕ ಹಾಗೂ ಆಪ್ತಸಲಹೆಗಾರ**

ಪ್ರಾಧ್ಯಾಪಕನಾಗಿ ಬೆಳೆಯಲು ಅವಶ್ಯವಾದ ಹಲವಾರು ಸಂಗತಿಗಳನ್ನು ನಾನು ಎಸ್.ಆರ್. ಮಲ್ಯರಿಂದ ಕಲಿತೆ. ತರಗತಿಗಳಲ್ಲಿ ಕೀಟಲೆ ಮಾಡುವ ಭಾಗಿಗಳನ್ನು ನಿಭಾಯಿಸುವುದು ಹೇಗೆ? ಅನಾವಶ್ಯಕ ಪ್ರಶ್ನೆಗಳನ್ನು ಕೇಳುತ್ತಾ ಉಪನ್ಯಾಸಕ್ಕೆ ತೊಂದರೆ ಮಾಡುವ ಭಾಗಿಗಳನ್ನು ನಿರ್ವಹಿ ಸುವುದು ಹೇಗೆ? ಕೇಳುಗರ ಗಮನ ಸೆಳೆಯುವಂತೆ ಉಪನ್ಯಾಸವನ್ನು ಚಮತ್ಕಾರಿಕವಾಗಿ ಆರಂಭಿಸುವುದು ಹೇಗೆ? ಉಪನ್ಯಾಸದ ಮುಕ್ತಾಯದಲ್ಲೊಂದು ಮಾತಿನ ಪಂಚ್ (ಗುದ್ದು) ನೀಡುವುದು ಹೇಗೆ? ಇವನ್ನೆಲ್ಲ ಅವರನ್ನು ನೋಡಿ ಕಲಿಯಲು ಸಾಧ್ಯವಾಯಿತು.

ಮಾನವ ಸಂಬಂಧಗಳು, ವ್ಯಕ್ತಿ-ವ್ಯಕ್ತಿ ಸಂಬಂಧಗಳು, ವ್ಯಕ್ತಿತ್ವ ವಿಕಸನ, ಬದುಕಿನ ಪ್ರೇರಣೆ, ಬದುಕಿನಲ್ಲಿ ಹಾಸ್ಯ, ಸಂವಹನ ಕಲೆ, ಉತ್ತಮ ಭಾಷಣಕಾರ ಆಗುವುದು ಹೇಗೆ? ಬದುಕಿನಲ್ಲಿ ಅಧ್ಯಾತ್ಮ, ಭಗವದ್ಗೀತೆಯ ಸಂದೇಶ, ಭಗವದ್ಗೀತೆಯ ಮೆನೇಜ್-ಮೆಂಟ್ ತತ್ವಗಳು, ಪರಿಣಾಮಕಾರಿ ಮೆನೇಜ್-ಮೆಂಟ್ ಸೂತ್ರಗಳು ಮತ್ತು ಬ್ಯಾಂಕ್ ವ್ಯವಹಾರದ ವಿಷಯಗಳು-ಇವು ಎಸ್.ಆರ್.ಮಲ್ಯರು ಉಪನ್ಯಾಸ ನೀಡುತ್ತಿದ್ದ ಪ್ರಧಾನ ವಿಷಯಗಳು.

ಹಲವಾರು ಜನರು ಎಸ್.ಆರ್. ಮಲ್ಯರ ಬಳಿ ಬರುತ್ತಿದ್ದದ್ದು ಅವರ ಸಲಹೆ ಕೇಳಲಿಕ್ಕಾಗಿ. ಅವರೊಬ್ಬ ಪರಿಣಾಮಕಾರಿ ಆಪ್ತಸಲಹೆಗಾರ (ಕೌನ್ಸಿಲರ್). ಯಾರೇ ಬಂದು ಸಮಸ್ಯೆ ಹೇಳಿ ಕೊಂಡರೂ ಅವರು ಗಮನವಿಟ್ಟು ಕೇಳು ತ್ತಿದ್ದರು. ಅನಂತರ, ತಮ್ಮ ಅಧ್ಯಯನ ಹಾಗೂ ಅನು ಭವದ ಬಲದಿಂದ ಸೂಕ್ತ ಪ್ರತಿಕ್ರಿಯೆ ನೀಡುತ್ತಿದ್ದರು. ಅದರಿಂದಾಗಿ ಸಮಸ್ಯೆ ಇದ್ದವರ ಮನಸ್ಸು ಹಗುರಾ ಗುತ್ತಿದ್ದದ್ದು ಖಂಡಿತ. ಯಾವುದೇ ಸಮಸ್ಯೆ ದೊಡ್ಡದಲ್ಲ, ಅದು ಹತ್ತಿಯಂತೆ ಹಗುರ ಎಂದು ಬಿಂಬಿಸುವ ಚಾಕಚಕ್ಯತೆ ಅವರಲ್ಲಿತ್ತು.

ಯಾಕೆಂದರೆ ಎಸ್.ಆರ್.ಮಲ್ಯರು ಬದುಕಿನ ಏಳು-ಬೀಳುಗಳನ್ನು ಅನುಭವಿಸಿದವರು. ಕುಂದಾಪುರ ಹತ್ತಿರದ ಸೌದದ ಬಡ ಕುಟುಂಬದಲ್ಲಿ ಹುಟ್ಟಿದ ಮಲ್ಯರು ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲೇ ತಂದೆಯನ್ನು ಕಳೆದು ಕೊಂಡರು. ಅವರದು ಐದು ಸೋದರಿಯರು ಮತ್ತೊಬ್ಬ ಸೋದರನ ದೊಡ್ಡ ಕುಟುಂಬ. ಶಾಲೆಯ ಶುಲ್ಕ ಕಟ್ಟಲು ಮತ್ತು ಶಾಲಾ ಪುಸ್ತಕ ಖರೀದಿಸಲು ಹಣಕ್ಕಾಗಿ ಕೈಯೊಡ್ಡಬೇಕಾದ ಪರಿಸ್ಥಿತಿ ಯಿತ್ತು. ಬಂಧುಗಳ ಸಹಾಯದಿಂದ ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಾಯಿತೆಂದು ನೆನೆಯುತ್ತಿದ್ದರು.

ಕಾರವಾರದಲ್ಲೊಮ್ಮೆ ಬ್ಯಾಂಕ್ ಕ್ಲಾರ್ಕ್ ಉದ್ಯೋಗಾಕಾಂಕ್ಷಿಗಳಿಗೆ ಆಯ್ಕೆ ಪರೀಕ್ಷೆಗೆ ಮೂರು ದಿನಗಳ ತರಬೇತಿ ನೀಡಬೇಕಾಗಿತ್ತು. ನಾಲ್ಕು ವಿಷಯಗಳ ಬಗ್ಗೆ ತರಬೇತಿ ನೀಡಲು ನೀವೊಬ್ಬರು ಜೊತೆಗಿದ್ದರೆ ಸಾಕು ಎಂದು ನನ್ನನ್ನು ಹುರಿದುಂಬಿಸಿ ಕರೆದೊಯ್ದರು. ಆ ತರಬೇತಿಯನ್ನು ಯಶಸ್ವಿಯಾಗಿ ನಾವಿಬ್ಬರೇ ನಡೆಸಿದೆವು. ಈ ರೀತಿಯಲ್ಲಿ ಅವರು ಹಲವರಲ್ಲಿ ಆತ್ಮವಿಶ್ವಾಸ ಬೆಳೆಯಲು ಕಾರಣರಾಗಿದ್ದರು.

ಎಸ್.ಆರ್.ಮಲ್ಯರ ಪತ್ನಿ ಶ್ರೀಮತಿ ಗೌರಿ ಮಲ್ಯರು ಕುಟುಂಬವನ್ನು ಸಮರ್ಥವಾಗಿ ನಿರ್ವಹಿಸಿದ ಮಹಿಳೆ. ಆಕಾಶವಾಣಿಯಲ್ಲಿ ಕೊಂಕಣಿಯಲ್ಲಿ ಹಲವಾರು ಉಪನ್ಯಾಸಗಳನ್ನು ನೀಡಿರು ವುದು ಮತ್ತು ಅನೇಕ ಲೇಖನಗಳನ್ನು ಬರೆದಿರುವುದು ಅವರ ಹೆಗ್ಗಳಿಕೆ. ಮನೆಗೆ ಬಂದ ಅತಿಥಿಗಳಿಗೆ ಹಸನ್ಮುಖದ ಆತಿಥ್ಯ ನೀಡುವವರು. ಎಸ್.ಆರ್.ಮಲ್ಯರ ನಿಧನಾ ನಂತರ, ಮಾನವ ಸಂಬಂಧಗಳ ಬಗೆಗಿನ ಕೆಲವು ಪುಸ್ತಕಗಳನ್ನು ನನಗಿತ್ತು ನಿಮಗೆ ಇವು ಪ್ರಯೋಜನಕ್ಕೆ ಬಂದೀತು ಎಂದವರು ಗೌರಿ ಮಲ್ಯ.

ತಮ್ಮ ನಾಲ್ಕು ಹೆಣ್ಣು ಮಕ್ಕಳಿಗೂ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರ ನೀಡಿದವರು ಎಸ್. ಆರ್.ಮಲ್ಯ ದಂಪತಿ. ಮುಂದಿನ ತಲೆಮಾರಿಗಾದ ತುಂಬಲಾರದ ನಷ್ಟ ಎಸ್.ಆರ್.ಮಲ್ಯರು ಬರವಣಿಗೆಯಲ್ಲಿ ತೊಡಗಲಿಲ್ಲ ಎಂಬುದು. ಅವರ ಮಗಳು ಲತಾ, ತಂದೆ ತೀರಿಕೊಂಡ ಬಳಿಕ, ಅವರ ಸ್ಫೂರ್ತಿ ದಾಯಕ ಚಿಂತನೆಗಳನ್ನು ಸೋಲ್ ಫುಡ್-ಎ ಕಲೆಕ್ಷನ್ ಆಫ್ ಪಾಸಿಟಿವ್ ಥಾಟ್ಸ್ ಎಂಬ ಶೀರ್ಷಿಕೆಯ ಪುಟ್ಟ ಪುಸ್ತಕವಾಗಿ ಪ್ರಕಟಿಸಿದ್ದಾರೆ.

ಎಸ್.ರಾಮಚಂದ್ರ ಮಲ್ಯರು ಇಂದು ನಮ್ಮೊಂದಿಗಿಲ್ಲ. ಆದರೆ ಅವರಿಂದ ಪ್ರಭಾವಿತರಾದ ನನ್ನಂತಹ ಸಾವಿರಾರು ಜನರ ಮನದಲ್ಲಿ ಅವರು ನೆಲೆಸಿದ್ದಾರೆ. ಅವರ ನಗುಮುಖ, ಆಪ್ತ ಧ್ವನಿ, ಸ್ಫೂರ್ತಿಯ ಮಾತುಗಳು, ಹುರಿದುಂಬಿಸುವ ಪರಿ, ಇಡೀ ಬದುಕಿನಲ್ಲಿ ಸಕಾರಾತ್ಮಕ ನಡವಳಿಕೆ ಇವನ್ನೆಲ್ಲ ಎಂದಿಗೂ ಮರೆಯಲಾಗದು.

## ಮಯೂರ ಹಾಸ್ಯ



ಸಂಪದದಲ್ಲಿ ಕಳೆದ ವಾರದ ತನಕ ನೀವು ವಿವಿದೆಡೆಯಿಂದ ಸಂಗ್ರಹಿತ ಹಾಸ್ಯತುಣುಕುಗಳ ಸವಿಯನ್ನು ಉಂಡಿರುವಿರಿ. ಈಗ ಮತ್ತೊಮ್ಮೆ ಹಳೆಯ ಮಯೂರ ಪತ್ರಿಕೆಯಲ್ಲಿ ಪ್ರಕಟವಾದ ಹಾಸ್ಯ ಪ್ರಸಂಗಗಳನ್ನು ಓದುವ ಸಮಯ ಬಂದಿದೆ. ಇನ್ನು ಕೆಲವು ವಾರ ಮಯೂರ ಹಾಸ್ಯ ಪ್ರಕಟವಾಗಲಿದೆ. ಓದಿ ನಕ್ಕು ಆನಂದ ಪಡಿ

### ಬಲಗಾಲಿಟ್ಟು ಒಳಗೆ ಬಾ

ನನ್ನ ತಂಗಿ ಹೊಸದಾಗಿ ಗಂಡನ ಮನೆಗೆ ಹೋದಾಗಿನ ಅನುಭವ. ಅವಳಿಗೆ ಎಡ-ಅನ್ನುವುದು ಯಾವಾಗಲೂ ಗೊಂದಲದ ವಿಷಯ. ಅವರದು ಪ್ರೇಮ ವಿವಾಹವಾದ್ದರಿಂದ ಅವಳ ಈ ಸಂಕಷ್ಟ ಅವಳ ಗಂಡನಿಗೂ ಗೊತ್ತಿತ್ತು. ಮದುವೆಯ ನಂತರ ಗಂಡನ ಮನೆಗೆ ಕಾಲಿಡುವಾಗ ಅಕ್ಕಿಯ ಸೇರನ್ನು ಬಲಗಾಲಿನಿಂದ ಒದ್ದು ಒಳಗೆ ಕಾಲಿಡುವುದು ಸಂಪ್ರದಾಯ. ಅವಳತ್ತೆ ಬಲಗಾಲಿಟ್ಟು ಒಳಗೆ ಬಾರಮ್ಮ ಅಂದಾಗ, ಇವಳು ಯಾವುದು ಬಲಗಾಲುಎನ್ನುವ ಗೊಂದಲಕ್ಕೆ ಬಿದ್ದಳು. ಕೂಡಲೇ ಗಂಡ, ಈಕಾಲು ಕಣೆ ಮಾರಾಯ್ತಿ ಎಂದು ಅವಳ ತೊಡೆ ಮುಟ್ಟಿ ತೋರಿಸಿ, ಎಚ್ಚರಿಸಿದ್ದಕ್ಕೆ ಅದೇ ಕಾಲು ಎತ್ತಿಟ್ಟಿದ್ದಳು.

**-ಸುವರ್ಣ ಮಠ**

### ಮುದುಕ್ಯಾರ ಅಂಗಡಿ

ಲಿಂಗಸಗೂರಿನ ಪ್ರಮುಖ ಬೀದಿಯಲ್ಲಿರುವ ಚಹಾದ ಅಂಗಡಿಯಲ್ಲಿ ಸಂಜೆ ನನ್ನ ಗೆಳೆಯ ರೊಂದಿಗೆ ಬಿಸಿಬಿಸಿಯಾದ ಬೆಲ್ಲದ ಚಹಾ ಕುಡಿಯುವುದು ನಿತ್ಯದ ರೂಢಿ. ಅವತ್ತು ಎಂದಿನಂತೆ ಸಂಜೆ ಚಹಾ ಕುಡಿಯುತ್ತ, ಹರಟೆ ಹೊಡೆಯುತ್ತಾ ಕುಳಿತಿದ್ದಾಗ ಹಳ್ಳಿಯ ಹೆಂಗಸೊಬ್ಬಳು ಬಂದು, ಅಣ್ಣ ಇಲ್ಲಿ ಮುದುಕ್ಯಾರ ಅಂಗಡಿ ಎಲ್ಲಿ ಆದ? ಎಂದಳು.

ತಬ್ಬಿಬ್ಬಾದ ನಾವು ಇದೇನಪ್ಪಾ ಹೊಸ ಅಂಗಡಿ ಎಂದುಕೊಂಡು ಒಬ್ಬರ ಮುಖ ಒಬ್ಬರು ನೋಡಿಕೊಂಡೆವು. ಆಕೆ, ಅದೇ ಕಣಣ್ಣ, ಮುದುಕ್ಯಾರ ಅಂಗಡಿ... ಸಬ್ಬು (ಸಾಬೂನು), ಹಲ್ಲು ಮಲಾಮು(ಪೇಸ್ಟ್). ಪೋಡಾರು(ಪೌಡರ್) ಇಂಥವೆಲ್ಲ ಸಿಗ್ತಾವ ನೋಡ್ರಿ ಅಂದಳಾಕೆ. ಆಕೆ ಹುಡುಕುತ್ತಿರುವುದು ಪಕ್ಕದಲ್ಲಿರುವ ಮೋದಿಕೇರ್ ಹೆಸರಿನ ವಸ್ತು ಸಿಗುವ ಅಂಗಡಿ ಎಂಬುದು ತಿಳಿಯಿತು. ಮುಸಿ ಮುಸಿ ನಗುತ್ತಾ ನಾವು ಆಕೆಗೆ ದಾರಿ ತೋರಿದೆವು.

**-ಗಿರೀಶ ಸೊಲ್ಲಾಪುರ**

### ಶಬ್ದ ರಹಿತ...

ನನಗೊಂದು ಹೊಸ ಮಿಕ್ಸರ್ ಕೊಳ್ಳಬೇಕಾಗಿತ್ತು. ಖರೀದಿಸಲು ಮಾಲ್‌ಗೆ ಹೋದೆ. ತರಹೇವಾರಿ ಮಿಕ್ಸರ್ ಕಮ್ ಗ್ರೈಂಡರ್‌ಗಳನ್ನು ಅಲ್ಲಿ ಪೇರಿಸಿಟ್ಟಿದ್ದರು. ಶಬ್ಬ ರಹಿತ ಮಿಕ್ಸರ್ ಎಂದು ಬರೆದ ಪೆಟ್ಟಿಗೆ ನನ್ನನ್ನು ತುಂಬಾ ಆಕರ್ಷಿಸಿತು. ಪೆಟ್ಟಿಗೆ ಬಿಚ್ಚಿಸಿ ನೋಡಿದೆ. ಮಿಕ್ಸರ್ ನೋಡಲು ಚಂದವಾಗಿತ್ತು. ಅದನ್ನೇ ಆಯ್ಕೆ ಮಾಡಿ ಹಚ್ಚಿ ತೋರಿಸುವಂತೆ ಅಂಗಡಿಯವನಿಗೆ ವಿನಂತಿಸಿದೆ. ಅದರ ಶಬ್ದವೇನೂ ಇತರ ಕಂಪನಿಗಳ ಮಿಕ್ಸರ್‌ಗಿಂತ ಕಡಿಮೆ ಇರಲಿಲ್ಲ. ಇದೇನ್ರೀ ಶಬ್ದ ರಹಿತ ಯಂತ್ರ ಅಂತೀರಿ. ಇದೂ ಕೂಡ ಸಾಕಷ್ಟು ಶಬ್ದ ಮಾಡುತ್ತಿಲ್ಲ? ಎಂದೆ. ಸರ್ ಆನ್ ಮಾಡಿದಾಗ ಮಾತ್ರ ಶಬ್ದ ಬರುತ್ತೆ ಸರ್ ಎನ್ನಬೇಕೇ?


**-ಸುರೇಶ ಹೆಗಡೆ**

### ಸಿಸಿಟಿವಿ

ಯಾವುದೋ ಕಟ್ಟಡದ ಕೋಣೆಯೊಳಗೆ ಪುಟ್ಟ ಡಬ್ಬಿಯೊಳಗೆ ಬಂದಿಯಾಗಿದ್ದ ಸಿಸಿಟಿವಿ ಯೊಂದು ತನ್ನ ಗೆಳೆಯರ ಜೊತೆಗೂಡಿ ನಾಲ್ಕು ರಸ್ತೆ ಸೇರುವಲ್ಲಿ ಬಂದು ನೇತು ಬಿಳಲಾರಂಬಿಸಿತು .ಅದಕ್ಕೆ ಹೆಚ್ಚಿನ ಕೆಲಸವೇನು ಇಲ್ಲ ತನ್ನ ಕಣ್ಣ ಮುಂದೆ ಕಾಣುವುದನ್ನು ಹಾಗೆಯೇ ಮುಂದೆ ದಾಟಿಸಿ ಬಿಡುವುದು. ಇದೇ ಕೆಲಸವನ್ನ ಮಾಡ್ತಾನೆ ಇತ್ತು. ಹಲವು ಜನ ಬದುಕು ಬದಲಿಸಿ ಕೊಂಡರು, ತಪ್ಪು ದಾರಿಯಲ್ಲಿ ಹೋಗ್ತಾ ಇದ್ದವರು ಸರಿದಾರಿಯ ಕಡೆಗೆ ತಿರುಗಿಬಿಟ್ಟರು. ಸರ್ಕಾರಕ್ಕೆ ಅವರ ದಂಡದಿಂದ ಒಂದಷ್ಟು ಹಣ ಸಂಪಾದನೆ ಆಗ್ತಾ ಇತ್ತು. ಆದರೆ ಅದೇ ರಸ್ತೆಯ ತುಂಬೆಲ್ಲಾ ಬಿದ್ದಿರುವ ಹೊಂಡಗಳಿಂದ ಗಾಯ ಮಾಡಿಕೊಂಡವರು ಅಪಘಾತಕ್ಕೀಡಾದವರು, ಪ್ರಾಣ ಕಳೆದುಕೊಂಡವರನ್ನು ನೋಡ್ತಾನೆ ಇತ್ತು. ಅಲ್ಲಲ್ಲಿ ಬಿದ್ದಿರುವ ಕಸದ ರಾಶಿಗಳನ್ನು ಕಂಡು ಕಣ್ಣು ಮುಚ್ಚಿಕೊಳ್ಳದಾಗದ್ದಕ್ಕೆ ನೋವು ಪಡ್ತಾ ಇತ್ತು. ಆದರೆ ಏನೋ ಬದಲಾವಣೆಗಳಾಗದನ್ನು ಕಂಡು ಅದಕ್ಕೆ ಬೇಸರವಾಗುತ್ತಿತ್ತು. ಬದಲಾವಣೆಯಾಗಲಿ ಎನ್ನುವ ಆಸೆ ಅದರದ್ದು. ಆದರೆ ಅದನ್ನ ನಿಯಂತ್ರಿಸುವವ ತನಗೆ ಅಗತ್ಯವಿದ್ದದ್ದನ್ನು ಮಾತ್ರ ನೋಡಿ ಉಳಿದದ್ದನ್ನು ಕಡೆಗಣಿಸಿ ಬಿಡುತ್ತಾನೆ. ಮತ್ತೆ ಮತ್ತೆ ಕಾಯುತ್ತಿದೆ ತನ್ನಿಂದ ಬದಲಾವಣೆ ಆಗೂದಾದರೂ ಹೇಗೆ ಅಂತ ಯೋಚನೆ ಮಾಡುತ್ತಿದೆ.

**- ಧೀರಜ್ ಬೆಳ್ಳಾರೆ**

# ವಿವೇಚನೆಯು ಆತ್ಮಜ್ಞಾನದ ಆಧಾರವಾಗಿದೆ



ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದನ್ನು ಆಲೋಚಿಸುವ ಒಂದು ಕ್ರಿಯೆ ವಿವೇಚನೆಯಾಗಿದೆ. ನಮ್ಮ ಸುತ್ತಮುತ್ತಲ ಜಗತ್ತು ಆಗಾಗ ಹೀಗೆ ಹೇಳುತ್ತಿರುತ್ತದೆ. ಸ್ವಲ್ಪ ವಿವೇಚನೆ ಮಾಡಿ ಮಾತನಾಡಿ, ಸ್ವಲ್ಪ ವಿವೇಚನೆಯಿಂದ ವರ್ತಿಸಿ, ವಿವೇಚನೆಯಿಲ್ಲದೆ ಆತ ಪ್ರಾಣ ಕಳೆದುಕೊಂಡ, ಸಾಂದರ್ಭಿಕ ವಿವೇಚನೆಯಿಂದ ಈ ತಂಡವು ಆಟದಲ್ಲಿ ಗೆಲುವು ಸಾಧಿ ಸಿತು. ನ್ಯಾಯಾಲಯದಲ್ಲಿ ನ್ಯಾಯಾಧೀಶರು ತಮ್ಮ ವಿವೇಚನೆಯಿಂದ ತೀರ್ಪು ನೀಡಿದರು.

ಶಿಕ್ಷಕರು ತಮ್ಮ ವಿವೇಚನೆಯಿಂದ ವಿದ್ಯಾರ್ಥಿಗಳ ನಡುವಿನ ಗೊಂದಲವನ್ನು ನಿವಾರಿಸಿದರು. ಹೀಗೆ ಹಲವೆಡೆಗಳಲ್ಲಿ ವಿವೇಚನೆ ಎಂಬ ಪದವನ್ನು ಬಳಸಿರುವುದನ್ನು ಗಮನಿಸಿದ್ದೇವೆ. ಹಾಗಾ ದರೆ ವಿವೇಚನೆ ಎಂದರೇನು? ನಮ್ಮಲ್ಲಿ ವಿವೇಚನೆ ಏಕಿರಬೇಕು? ನಾವೇಕೆ ವಿವೇಚನೆಯಿಂದ ಮಾತನಾಡಬೇಕು ಮತ್ತು ವರ್ತಿಸಬೇಕು. ವಿವೇಚನೆ ಹೊಂದುವುದರಿಂದ ಏನೇನು ಪ್ರಯೋಜ ನಗಳಿವೆ? ಎಂಬೆಲ್ಲಾ ಪ್ರಶ್ನೆಗಳು ನಮ್ಮ ಮನಸ್ಸಿನಲ್ಲಿ ಮೂಡುವುದು ಸಹಜವೇ ಆಗಿದೆ. ವಿವೇಚ ನೆಯ ಪರಿಕಲ್ಪನೆ ಪ್ರತಿಯೊಬ್ಬರಿಗೂ ಇರಬೇಕಾದುದು ಅವಶ್ಯ. ಏಕೆಂದರೆ ಪ್ರಪಂಚದಲ್ಲಿನ ಕೋಟ್ಯಾನುಕೋಟಿ ಜೀವರಾಶಿಗಳಲ್ಲಿ ಮನುಷ್ಯನು ಮಾತ್ರ ಎಲ್ಲಾ ಜೀವರಾಶಿಗಳಿಗಿಂತ ವಿಭಿನ್ನ, ವಿಶಿಷ್ಟ ಹಾಗೂ ವೈವಿಧ್ಯಮಯನೂ ಆಗಿದ್ದಾನೆ ಕಾರಣ ಆತನಿಗೆ ವಿವೇಚನಾ ಶಕ್ತಿ ಇರುವುದೇ ಒಂದು ಅನನ್ಯ ಸಂಗತಿಯಾಗಿದೆ.

ವಿವೇಚನೆ ಎಂದರೆ ಕೇವಲ ಯೋಚಿಸುವುದು ಅಲ್ಲ, ಅದು ಸರಿಯಾದ ಮತ್ತು ತಪ್ಪಾದ, ಒಳ್ಳೆಯದು ಮತ್ತು ಕೆಟ್ಟದ್ದು, ನ್ಯಾಯ ಮತ್ತು ಅನ್ಯಾಯದ ನಡುವಿನ ವ್ಯತ್ಯಾಸವನ್ನು ಗ್ರಹಿಸುವ ಮತ್ತು ಅದರ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಉನ್ನತ ಮಟ್ಟದ ಮಾನಸಿಕ ಸಾಮರ್ಥ್ಯ. ಇದು ಮನುಷ್ಯನಿಗೆ ಸಿಕ್ಕಿರುವ ಒಂದು ಅಮೂಲ್ಯ ವರವಾಗಿದ್ದು, ಸಮೃದ್ಧ ಹಾಗೂ ನೆಮ್ಮದಿಯ ಬದುಕಿಗೆ ದಿಕ್ಸೂಚಿಯಾಗಿದೆ. ವಿವೇಚನೆ ಎಂದರೆ ವಿವಿಧ ವಿಷಯಗಳು ಅಥವಾ ವಸ್ತುಗಳ ನಡುವಿನ ಭಿನ್ನತೆ ಅಥವಾ ವ್ಯತ್ಯಾಸವನ್ನು ನಾವು ಗ್ರಹಿಸುವ ಮತ್ತು ಘೋಷಿ ಸುವ ತೀರ್ಪು ಎನ್ನಬಹುದು. ವಿವೇಚನೆ ಎಂಬ ಪದದಲ್ಲಿ ಗ್ರಹಿಸು, ಪ್ರತ್ಯೇಕಿಸುವ, ಮೌಲ್ಯೀಕರಿಸುವ, ಸೂಕ್ಷ್ಮಗ್ರಾಹಿಯಾಗಿ ತೀರ್ಪು ನೀಡು ಎಂಬ ಅರ್ಥಗಳನ್ನು ನೀಡುತ್ತದೆ. ವಿವೇಚನೆ ಎಂಬ ಪದವು ತೀರ್ಪಿನ ಸಮಾನಾರ್ಥಕ ಪದವಾಗಿದೆ. ವಿವೇಚನೆಯು ಒಳನೋಟವುಳ್ಳ, ಪ್ರತ್ಯೇಕಿಸುವ, ಪ್ರಮಾಣೀಕರಿಸುವ, ಅರ್ಥಮಾಡಿಕೊಳ್ಳುವ, ಅಂದರೆ, ವ್ಯಕ್ತಿಯೊಬ್ಬನು ತಾನು ಅರ್ಥಮಾಡಿಕೊಳ್ಳಬೇಕಾದ, ಯಾವುದನ್ನಾದರೂ ಗ್ರಹಿಸಿದಾಗ, ಒಳ್ಳೆಯದು ಮತ್ತು ಕೆಟ್ಟದ್ದನ್ನು ಗುರುತಿಸುವುದು, ಸರಿ ಮತ್ತು ತಪ್ಪು ಹಾಗೂ ಅವನ ವರ್ತನೆಯ ವಿಧಾನದಲ್ಲಿ ವಿವೇಕಯುತವಾಗಿರಬೇಕು ಎಂಬುದನ್ನು ತಿಳಿಸುತ್ತದೆ.

ವಿವೇಚನೆಯ ಒಂದು ಕ್ರಿಯೆಯಾಗಿದ್ದು, ಸದ್ಗುಣವೂ ಆಗಿದೆ. ಇದು ನೈತಿಕ ತೀರ್ಪಿನೊಂದಿಗೆ ಸಂಪರ್ಕ ಹೊಂದಿದ ಒಂದು ಸದ್ಗುಣವಾಗಿದೆ. ಯಾವುದು ಒಳ್ಳೆಯ ಕೆಲಸ ಮತ್ತು ಯಾವುದು ಕೆಟ್ಟ ಕೆಲಸ ಎಂಬುದನ್ನು ಮೌಲ್ಯೀಕರಿಸಲು, ತೀರ್ಮಾನಿಸಲು ಈ ವಿವೇಚನೆಯು ವ್ಯಕ್ತಿಗೆ ಅವಕಾಶ ಮಾಡಿಕೊಡುತ್ತದೆ. ಯಾರು ಸರಿ ಮತ್ತು ಯಾರು ತಪ್ಪು ಎಂದು ಆಲೋಚಿಸುವ ಬದಲಾಗಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದನ್ನು ಆಲೋಚಿಸಬೇಕಾಗುತ್ತದೆ. ಇದೇ ವಿವೇಚನೆಯೂ ಆಗಿದೆ.

ಉದಾಹರಣೆಗೆ, ಒಬ್ಬ ವ್ಯಕ್ತಿಯು ಕೆಲಸ ಯಾವುದೇ ಒಂದು ಕೆಲಸ ಮಾಡುವಾಗ, ಅವನು ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಸಲುವಾಗಿ ತಾನು ಮಾಡುವ ಕೆಲಸ ಯಾವುದು ಎಂಬುದರ ಬಗ್ಗೆ ಮತ್ತು ಆ ಕೆಲಸದ ಒಳ್ಳೆಯದು ಮತ್ತು ಕೆಟ್ಟದ್ದನ್ನು ವಿಶ್ಲೇಷಣೆ ಮಾಡಬೇಕು. ಆಗ ಆ ಕೆಲಸವು ವಿವೇಚನೆಗೆ ಒಳಪಡುತ್ತದೆ ಮತ್ತು ಆ ವ್ಯಕ್ತಿ ವಿವೇಚನೆ ಹೊಂದಿದ ವ್ಯಕ್ತಿ ಎನ್ನಿಸಿಕೊಳ್ಳುತ್ತಾನೆ. ಮತ್ತೊಂದು ಉದಾಹರಣೆ ಹೇಳುವುದಾದರೆ ಒಬ್ಬ ವ್ಯಕ್ತಿಯು ಜನರ ಗುಂಪಿನಲ್ಲಿ ಕಾರ್ಯನಿರ್ವಹಿಸಿದಾಗ ಆರೋಗ್ಯಕರ ಸಹಬಾಳ್ವೆಯನ್ನು ಮುನ್ನಡೆಸಲು ಅವನು ತನ್ನ ಕಾರ್ಯಗಳ ಒಳ್ಳೆಯದು ಮತ್ತು ಕೆಟ್ಟದ್ದನ್ನು ನಿರ್ಧರಿಸಲು ತನ್ನ ಪರಿಸರವನ್ನು ಗಮನಿಸಬೇಕು. ತನ್ನ ಜೊತೆಗಾರರನ್ನು ಗಮನಿಸಬೇಕು. ತನ್ನ ಸುತ್ತ ಆರೋಗ್ಯಕರ ವಾತಾವರಣದ ನಿರ್ಮಾಣಕ್ಕೆ ಶ್ರಮಿಸಬೇಕು. ಗುಂಪಿನಲ್ಲಿ ಅನಾರೋಗ್ಯಕರ ವಾತಾವರಣ ಇದೆ ಎಂದು ಗೊತ್ತಾದ ಮೇಲೂ ಆ ವಾತಾವರಣವನ್ನು ಸರಿಪಡಿಸಿಕೊಳ್ಳದೆ ಮುನ್ನಡೆದರೆ ಆನೆಯೊಂದು ಖೆಡ್ಡದಲ್ಲಿ ಬೀಳುವಂತೆ ಆ ವ್ಯಕ್ತಿಯು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಳ್ಳುತ್ತಾನೆ. ಅದಕ್ಕಾಗಿಯೇ ವಿವೇಚನೆ ಬಹಳ ಮುಖ್ಯವೆನಿಸಿದೆ.

ವಿವೇಚನೆಯ ಉತ್ತಮ ಚಿಂತನೆಗಳು ವಿವೇಚನೆಯನ್ನು ಅಳವಡಿಸಿಕೊಳ್ಳಲು ಮತ್ತು ಜೀವನ ದಲ್ಲಿ ಯಶಸ್ವಿಯಾಗಲು ಸಹಾಯ ಮಾಡುವ ಕೆಲವು ಪ್ರಮುಖ ಚಿಂತನೆಗಳ ಕುರಿತಾಗಿ ವಿಚಾರ ಮಾಡೋಣ. ಮೊದಲಿಗೆ ಸ್ವ-ಪ್ರಶ್ನೆ ಮತ್ತು ವಿಮರ್ಶಾತ್ಮಕ ಚಿಂತನೆಯಾಗಿದ್ದು, ಯಾವುದೇ ವಿಷಯವನ್ನು ಅಂತಿಮವೆಂದು ಒಪ್ಪಿಕೊಳ್ಳುವ ಮೊದಲು, ವಿವೇಚನಶೀಲ ವ್ಯಕ್ತಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾನೆ.

ಈ ನಿರ್ಧಾರದ ಎಲ್ಲಾ ಆಯಾಮಗಳು ಯಾವುವು?

ಅದರಿಂದ ನನಗೆ ಮತ್ತು ಇತರರಿಗೆ ಆಗುವ ಲಾಭ-ನಷ್ಟಗಳೇನು?

ಅದಕ್ಕೆ ಪರ್ಯಾಯ ಮಾರ್ಗಗಳು ಯಾವುವು?

ನಾನು ಭಾವನಾತ್ಮಕ ಒತ್ತಡದಲ್ಲಿದ್ದೇನೆಯೇ?

ವಿವೇಚನೆಯ ಕುರಿತು ಚಿಂತನೆ ನಡೆಸಬೇಕಾದರೆ ಸತ್ಯವನ್ನು ಹುಡುಕಲು ಯಾವಾಗಲೂ ಏಕೆ? ಮತ್ತು ಹೇಗೆ? ಎಂಬ ಪ್ರಶ್ನೆಗಳನ್ನು ಬಳಸಬೇಕು. ಅನುಮಾನಾಸ್ಪದ ವಿಚಾರಗಳನ್ನು ಒಪ್ಪಿ ಕೊಳ್ಳುವ ಬದಲು, ಅವುಗಳ ಆಳವನ್ನು ತಿಳಿಯಲು ಪ್ರಯತ್ನಿಸುವುದು ವಿವೇಚನೆಯ ಪರಮೋಚ್ಚ ಲಕ್ಷಣವಾಗಿದೆ. ವಿವೇಚನೆಯು ಪರಿಣಾಮಗಳ ಮುನ್ಸೂಚನೆಯಾಗಿದೆ. ವಿವೇಚ ನೆಯು ಕೇವಲ ವರ್ತಮಾನದಲ್ಲಿ ಬದುಕುವುದಲ್ಲ, ಬದಲಿಗೆ ಭವಿಷ್ಯವನ್ನು ಊಹಿಸಿ ವರ್ತ ಮಾನದಲ್ಲಿ ಸಿದ್ಧತೆ ಮಾಡುವುದು. ಉತ್ತಮ ವ್ಯವಸ್ಥಾಪಕ ಮತ್ತು ನಾಯಕ ಯಾವಾಗಲೂ ದೂರದೃಷ್ಟಿ ಹೊಂದಿರುತ್ತಾನೆ. ಇಲ್ಲಿಯ ಪ್ರಮುಖ ಚಿಂತನೆ ಎಂದರೆ, ಇಂದು ನಾನು ಹಾಕುವ ಶ್ರಮ ನಾಳೆ ಯಾವ ಫಲ ನೀಡಬಹುದು ಎಂಬ ದೃಷ್ಟಿಕೋನ ಇರಬೇಕಾಗುತ್ತದೆ. ಪ್ರತಿ ಕ್ರಿಯೆಗೂ ಒಂದು ಪ್ರತಿಕ್ರಿಯೆ ಇದೆ ಎಂಬ ಸಾರ್ವತ್ರಿಕ ಸತ್ಯವನ್ನು ಅರಿತು, ಅವಸರ ಪಡದೆ ವಿಳಂಬವಾದರೂ ಸರಿ, ಸರಿಯಾದ ಹೆಜ್ಜೆಯನ್ನೇ ಇಡಬೇಕು. ವಿವೇಚನೆಯ ಮಾತು ಮತ್ತು ಮೌನದ ವಿವೇಕವಾಗಿದೆ. ವಿವೇಚನಶೀಲ ವ್ಯಕ್ತಿಯ ದೊಡ್ಡ ಶಕ್ತಿ ಎಂದರೆ ಆತನ ಮಾತಿನ ಹಿಡಿತ. ಯಾವಾಗ ಮಾತನಾಡಬೇಕು, ಎಲ್ಲಿ ಮೌನವಾಗಿರಬೇಕು, ಎಷ್ಟು ಮಾತನಾಡಬೇಕು ಎಂಬು ದರ ಅರಿವು ವಿವೇಕಿಗೆ ಇರುತ್ತದೆ. ಇಲ್ಲಿಯ ಚಿಂತನೆಯು ಮಾತು ಬೆಳ್ಳಿ, ಮೌನ ಬಂಗಾರ ಎಂಬ ನಾಣ್ಣುಡಿಯು ವಿವೇಚನೆಯ ಸಾರಾಂಶವಾಗಿದೆ. ಆತುರದ ಅಥವಾ ಕೋಪದ ಮಾತುಗಳು ಸಂಬಂಧಗಳನ್ನು ಹಾಳುಮಾಡಬಹುದು. ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು 24 ಗಂಟೆಗಳ ಕಾಲ ಆಲೋಚಿಸಿ, ನಂತರ ಸ್ಪಷ್ಟವಾಗಿ ಮಾತನಾಡುವುದು ವಿವೇಚನೆಯ ಪರಮೋಚ್ಚ ಅಭಿವ್ಯಕ್ತಿಯಾಗಿದೆ. ವಿವೇಚನೆಯು ಸಮತೋಲನ ಮತ್ತು ಮಧ್ಯಮ ಮಾರ್ಗವಾಗಿದೆ. ಅತಿಯಾದ ಆಸೆ, ಅತಿಯಾದ ಭಯ ಅಥವಾ ಅತಿಯಾದ ತ್ಯಾಗ-ಇವೆಲ್ಲವೂ ವಿವೇಚನೆಯ ಕೊರತೆಯಿಂದ ಉಂಟಾಗುವ ತಪ್ಪು ನಿರ್ಧಾರಗಳು. ವಿವೇಕಿಯು ಯಾವಾಗಲೂ ಸಮತೋಲನ ವನ್ನು ಬಯಸುತ್ತಾನೆ. ಅದರ ಚಿಂತನೆಯನ್ನು ನೋಡುವುದಾದರೆ, ಅರಿಸ್ಟಾಟಲ್ ಹೇಳಿದಂತೆ, ಸದ್ಗುಣಗಳು ಯಾವಾಗಲೂ ಎರಡು ತೀವ್ರತರದ ತಪ್ಪುಗಳ ನಡುವಿನ ಮಧ್ಯಮ ಮಾರ್ಗದಲ್ಲಿ ರುತ್ತವೆ. ಉದಾಹರಣೆಗೆ, ಹೇಡಿತನ ಮತ್ತು ದುಡುಕುತನದ ನಡುವೆ ಇರುವುದು ಧೈರ್ಯ. ಆದ್ದರಿಂದ, ಜೀವನದ ಪ್ರತಿ ಆಯಾಮದಲ್ಲಿ ಅತಿಯಾದ ಆಸ್ಪದ ನೀಡದೆ, ಸಮತೋಲನ ಸಾಧಿಸುವುದು ವಿವೇಕದ ಆಯ್ಕೆಯಾಗಿರುತ್ತದೆ.

ವಿವೇಚನೆಯು ಜ್ಞಾನ, ಅನುಭವ ಮತ್ತು ಆಂತರಿಕ ತಿಳುವಳಿಕೆಯ ಸಮ್ಮಿಲನದಿಂದ ಮೂಡಿಬರುತ್ತದೆ. ಇದು ಆತ್ಮಜ್ಞಾನದ ಆಧಾರವಾಗಿದೆ. ವಿವೇಚನೆಯ ಮೊದಲ ಹೆಜ್ಜೆ ಎಂದರೆ ಆತ್ಮಜ್ಞಾನ. ತನ್ನ ಶಕ್ತಿ-ದೌರ್ಬಲ್ಯಗಳು, ಇಷ್ಟ-ಅನಿಷ್ಟಗಳು ಮತ್ತು ಮಿತಿಗಳನ್ನು ಅರಿತವನು ಮಾತ್ರ ಸಮತೋಲಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯ. ವಿವೇಚನೆಯು ದೀರ್ಘಾ ವಧಿಯ ಚಿಂತನೆಯಾಗಿದೆ. ವಿವೇಚನಶೀಲ ವ್ಯಕ್ತಿ ಕ್ಷಣಿಕ ಲಾಭಕ್ಕಿಂತ ದೀರ್ಘಾವಧಿಯ ಪರಿಣಾಮಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತಾನೆ. ಇಂದಿನ ಒಂದು ಸಣ್ಣ ನಿರ್ಧಾರ ನಾಳಿನ ದೊಡ್ಡ ಯಶಸ್ಸು ಅಥವಾ ವೈಫಲ್ಯಕ್ಕೆ ಕಾರಣವಾಗಬಹುದೆಂಬ ಅರಿವು ಅವರಿಗಿರುತ್ತದೆ. ವಿವೇಚನೆಯು ಭಾವನಾತ್ಮಕ ನಿಯಂತ್ರಣವಾಗಿದೆ. ಕೋಪ, ಆಸೆ, ಭಯ ಅಥವಾ ದುಃಖ ದಂತಹ ಪ್ರಬಲ ಭಾವನೆಗಳ ಸುಳಿಗೆ ಸಿಲುಕಿದಾಗಲೂ, ವಿವೇಕಿಯು ತಟಸ್ಥವಾಗಿ ಮತ್ತು ವಸ್ತುನಿಷ್ಠವಾಗಿ ಯೋಚಿಸಲು ಪ್ರಯತ್ನಿಸುತ್ತಾನೆ. ಭಾವನೆಗಳಿಗೆ ಅಡಿಯಾಳಾಗದೆ, ಅವುಗಳನ್ನು ನಿಯಂತ್ರಿಸಿ ಮುನ್ನಡೆಯುವುದು ವಿವೇಚನೆಯ ಮುಖ್ಯ ಲಕ್ಷಣವಾಗಿದೆ.

ವಿವೇಚನೆ ಮಾಡುವ ವ್ಯಕ್ತಿಯ ಮನಸ್ಸು ಪರಿಶುದ್ಧವಾಗಿರಬೇಕಾಗುತ್ತದೆ. ಕಪಟ, ಕುತಂತ್ರ ಗಳಿಲ್ಲದ ನಿರ್ಮಲವಾದ ಬುದ್ಧಿಯು ಮುಂಬರುವ ಅಪಾಯವನ್ನು ತಡೆದು, ಜಯವನ್ನು ತಂದು ಕೊಡುತ್ತದೆ. ವಿವೇಚನೆಯು ಯಾವಾಗಲೂ ಸಮಯ ಸಂದರ್ಭವನ್ನು ಆಧರಿಸಿರುತ್ತದೆ. ವಿವೇಚನೆಯು ವೈಚಾರಿಕ ಮನೋಭಾವವನ್ನು ಪ್ರವಹಿಸಿದರೆ ಸೂಕ್ತವಾಗಿರುತ್ತದೆ. ವಿವೇಚ ನೆಯು ಅಂಧಾನುಕರಣೆಯಿಂದ ದೂರವಿರಬೇಕು. ನಾವು ಮಾಡುವ ವಿವೇಚನೆ ಹೇಗಿರಬೇಕೆಂದರೆ ಅದು ವಸ್ತುನಿಷ್ಠವಾಗಿರಬೇಕು. ಇಡೀ ಗುಂಪಿನ ಗೆಲುವಿಗೆ ಸಹಕರಿಸುವ ವಿವೇಚನೆ ಯಾಗಿರಬೇಕು. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ವಿವೇಚನೆ ಭಾರತವನ್ನು ಬ್ರಿಟಿಷರ ಬಂಧನದಿಂದ ಬಿಡುಗಡೆಗೊಳಿಸುವುದೇ ಆಗಿತ್ತು. ಆ ನಿಟ್ಟಿನಲ್ಲಿ ಎಲ್ಲಾ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರ ವಿವೇಚನೆಯೂ ಅದೇ ಆಗಿದ್ದುದರಿಂದ ಇಂದು ಭಾರತ ಸರ್ವ ಸ್ವತಂತ್ರ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಹೊರಹೊಮ್ಮಿದೆ. ಭಾರತದ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿಶುದ್ಧ ವಿವೇಚನೆ ಭಾರತದಂತಹ ಬೃಹತ್ ರಾಷ್ಟ್ರಕ್ಕೆ ಬೃಹತ್ ಸಂವಿಧಾನವನ್ನು ನೀಡಿದೆ. ಅಕ್ಷರದವ್ವ ಸಾವಿತ್ರಿ ಬಾಯಿ ಫುಲೆಯವರ ವಿವೇಚನೆ ಮತ್ತು ಶ್ರಮ ಇಂದು ಹೆಣ್ಣು ಮಕ್ಕಳು ವಿದ್ಯಾವಂತರಾಗಲು ಸಹಕಾರಿಯಾಗಿದೆ. ಮದರ್ ತೆರೆಸಾರವರ ವಿವೇಚನೆ ಮತ್ತು ಸಮಾಜದ ಕುರಿತಾದ ಕಾಳಜಿಯುಕ್ತ ಶ್ರಮವು ಇಂದು ಅವರನ್ನು ವಿಶ್ವಮಾತೆಯನ್ನಾಗಿಸಿದೆ. ಇದೇ ರೀತಿಯಲ್ಲಿ ಗೌತಮ ಬುದ್ಧ, ವರ್ಧಮಾನ ಮಹಾ ವೀರ, ಶಂಕರ, ರಾಮನುಜ, ಮಧ್ವಾಚಾರ್ಯರು, ಅಕ್ಕಮಹಾದೇವಿ, ಅಲ್ಲಮ ಬಸವಾದಿ ಶಿವಶರಣರು, ಪುರಂದರ ಕನಕಾದಿ ದಾಸ ಸಂತ ಶ್ರೇಷ್ಠರು, ರಾಜಾರಾಮ್ ಮೋಹನ ರಾಯ್, ದಯಾನಂದ ಸರಸ್ವತಿ, ಜ್ಯೋತಿರಾವ್ ಫುಲೆ, ಅನಿ ಬೇಸಂಟ್, ಸ್ವಾಮಿ ವಿವೇಕಾನಂದ ಮುಂತಾದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರೆಲ್ಲರ ವಿವೇಚನೆ ಮತ್ತು ಪರಿಶ್ರಮದಿಂದ ಭಾರತೀಯ ಸಮಾಜದ ನೆಲೆಗಟ್ಟು ಇಂದಿಗೂ ಭದ್ರವಾಗಿ ನಿಲ್ಲಲು ಕಾರಣವಾಗಿದೆ. ನಮ್ಮ ವಿವೇಚನಾಯುಕ್ತ ಚಟುವಟಿಕೆಗಳು ಸಮಾಜದ ಏಳಿಗೆಗೆ ಪೂರಕವಾಗಿರಬೇಕು. ನ್ಯಾಯ- ನೀತಿಯನ್ನು ಎತ್ತಿ ಹಿಡಿಯುವಂತಿರಬೇಕು. ರಾಷ್ಟ್ರ ಪ್ರೇಮ ಹಾಗೂ ವಿಶ್ವ ಭ್ರಾತೃತ್ವವನ್ನು ಪ್ರದರ್ಶಿಸುವಂತಿರಬೇಕು. ನಾವೆಲ್ಲರೂ ಸರಿಯಾದ ವಿವೇಚನಾಯುಕ್ತ ವಿವೇಕಿಗಳಾಗಿ ಭಾರತದ ಅಭಿವೃದ್ಧಿಗೆ ಶ್ರಮಿಸೋಣ ಮತ್ತು ಬದುಕೋಣ.

**-ಕೆ.ಎನ್.ಚಿದಾನಂದ, ಹಾಸನ.**

## ತಂತ್ರಜ್ಞಾನ ಪರ್ಯಾಯ ಅಲ್ಲ: ಸಿಜೆಐ ಸೂರ್ಯಕಾಂತ್

• ಪ್ರಜೋದಯ ವರದಿ



**ಕಟಕ್:** ತಂತ್ರಜ್ಞಾನವು ಮಾನವ ನ್ಯಾಯ ನಿರ್ಣಯದ ವೇಗ ಹೆಚ್ಚಿಸಲು ಮತ್ತು ದೋಷಗಳನ್ನು ಸರಿಪಡಿಸಲು ಬಳಕೆ ಆಗಬೇಕು. ಅದಕ್ಕೆ ಪರ್ಯಾಯವಾಗಿ ಬಳಕೆ ಆಗಲು ಸಾಧ್ಯವಿಲ್ಲ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹೇಳಿದರು.

**ಜನ ಸಾಮಾನ್ಯರಿಗೆ ನ್ಯಾಯವನ್ನು ಖಚಿತಪಡಿಸುವುದು**

ಕಾನೂನು ಹೋರಾಟದ ವೆಚ್ಚ ಮತ್ತು ವಿಳಂಬವನ್ನು ಕಡಿಮೆ ಮಾಡುವ ತಂತ್ರಗಳು ವಿಷಯದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣವನ್ನು ಉದ್ದೇಶಿಸಿ ಭಾನುವಾರ ಮಾತನಾಡಿದ ಅವರು, ವಿಚಾರಣಾ ನ್ಯಾಯಾಲಯದಿಂದ ಸಾಂವಿಧಾನಿಕ ನ್ಯಾಯಾಲಯ ದವರೆಗೆ ನ್ಯಾಯಾಂಗ ವ್ಯವಸ್ಥೆಯ ಪ್ರತಿಯೊಂದು ಹಂತದಲ್ಲೂ ಹಲವು ವರ್ಷಗಳಿಂದ ಅನೇಕ ಪ್ರಕರಣಗಳು ಬಾಕಿ ಉಳಿದಿವೆ. ಮೇಲಿನ ನ್ಯಾಯಾಲಯಗಳಲ್ಲಿ ಬಾಕಿ ಪ್ರಕರಣಗಳ ಸಂಖ್ಯೆ ಹೆಚ್ಚಿದಷ್ಟು, ಕೆಳ ಹಂತದ ನ್ಯಾಯಾಲಯಗಳ ಮೇಲಿನ ಒತ್ತಡ ಅಧಿಕವಾ ಗುತ್ತದೆಂದು ಹೇಳಿದರು.

ಬಾಕಿ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡಲು ನ್ಯಾಯಾಂಗ ಮೂಲಸೌಕರ್ಯವನ್ನು ಬಲಪಡಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು. ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಲು ಸಾಕಷ್ಟು ನ್ಯಾಯಾಲಯಗಳಿಲ್ಲದಿದ್ದರೆ, ಅತ್ಯಂತ ಪ್ರಾಮಾಣಿಕ ನ್ಯಾಯಾಂಗ ವ್ಯವಸ್ಥೆ ಕೂಡಾ ಒತ್ತಡಕ್ಕೆ ಸಿಲುಕಿ ಕುಸಿಯುತ್ತದೆ ಎಂದರು.

# ಭಾರತಕ್ಕೆ ಸಾಧಾರಣ ಗುರಿ

## ಲಯಬದ್ಧ ಬೌಲಿಂಗ್ ದಾಳಿ ಎದುರು ದ.ಆಫ್ರಿಕಾ ಪರದಾಟ




• ಪ್ರಜೋದಯ ವರದಿ

**ಧರ್ಮಶಾಲಾ:** ಭಾರತದ ವಿರುದ್ಧದ ಮೂರನೇ ಟಿ–20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 20 ಓವರ್‌ಗಳ ಅಂತ್ಯಕ್ಕೆ 10 ವಿಕೆಟ್ ನಷ್ಟಕ್ಕೆ 117 ರನ್ ಗಳಿಸಿದೆ.

ಐದು ಪಂದ್ಯಗಳ ಟಿ–20 ಸರಣಿಯ ಮೂರನೇ ಪಂದ್ಯದಲ್ಲಿ ಟಾಸ್ ಗೆದ್ದಿದ್ದ ಭಾರತವು ಮೊದಲು ಫೀಲ್ಡಿಂಗ್ ಆಯ್ದುಕೊಂಡಿತ್ತು. ಟೀಂ ಇಂಡಿಯಾಕ್ಕೆ ದಕ್ಷಿಣ ಆಫ್ರಿಕಾವು 118 ರನ್‌ಗಳ ಗುರಿ ನೀಡಿದೆ.

ನಾಯಕ ಏಡನ್ ಮರ್ಕರಂ 46 ಎಸೆತಗಳಲ್ಲಿ 61 ರನ್ (6 ಬೌಂಡರಿ ಹಾಗೂ 2 ಸಿಕ್ಸರ್) ಗಳಿಸುವ ಮೂಲಕ ಹರಿಣಗಳ ಇನಿಂಗ್ಸ್ ಕುಸಿಯದಂತೆ ನೋಡಿಕೊಂಡರು.

ಭಾರತದ ಲಯಬದ್ಧ ಬೌಲಿಂಗ್ ದಾಳಿಯ ಎದುರು, ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದರು.

ಕ್ವಿಂಟನ್ ಡಿ–ಕಾಕ್ 1, ರೀಜಾ ಹೆನ್ರಿಕ್ಸ್ 2, ಡೆವಾಲ್ಡ್ ಬ್ರೆವಿಸ್ 2, ಟ್ರಿಸ್ಟನ್ ಸ್ಟಬ್ಸ್ 9 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಟೀಂ ಇಂಡಿಯಾ ಪರ ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ, ಕುಲದೀಪ್ ಯಾದವ್ ಹಾಗೂ ವರುಣ್ ಚಕ್ರವರ್ತಿ ತಲಾ 2 ವಿಕೆಟ್ ಪಡೆದರೆ, ಹಾರ್ದಿಕ್ ಪಾಂಡ್ಯ ಮತ್ತು ಶಿವಂ ದುಬೆ ತಲಾ 1 ವಿಕೆಟ್ ಕಬಳಿಸಿದರು. ಸರಣಿಯು 1–1ರಲ್ಲಿ ಸಮಬಲವಾಗಿದ್ದು, ಬಲಾಢ್ಯ ಬ್ಯಾಟಿಂಗ್ ಬಲ ಹೊಂದಿರುವ ಭಾರತವು ಪಂದ್ಯ ಗೆಲ್ಲುವ ವಿಶ್ವಾಸದಲ್ಲಿದೆ.




## ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ದಾಂಧಲೆ

### ಆಯೋಜಕ ಶತಾದ್ರು ದತ್ತ 14 ದಿನ ಪೊಲೀಸ್ ಕಸ್ಟಡಿಗೆ




• ಪ್ರಜೋದಯ ವರದಿ

**ಕೋಲತ್ತಾ:** ಫುಟ್‌ಬಾಲ್ ದಿಗ್ಗಜ, ಅರ್ಜೆಂಟೀನಾದ ಲಯೋನೆಲ್ ಮೆಸ್ಸಿ ತಮ್ಮ ಕಾರ್ಯ ಕ್ರಮವನ್ನು ಮೊಟಕುಗೊಳಿಸಿ, ಹಠಾತ್ತನೇ ನಿರ್ಗಮಿಸಿದ್ದರಿಂದ ನಿರಾಸೆಗೊಂಡ ಅವರ ಅಭಿಮಾನಿಗಳು ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ದಾಂಧಲೆ ನಡೆಸಿದ್ದರು. ಪ್ರಕರಣ ಸಂಬಂಧ ಬಂಧನಕ್ಕೊಳಗಾಗಿರುವ, ಕಾರ್ಯಕ್ರಮದ ಮುಖ್ಯ ಆಯೋಜಕ ಶತಾದ್ರು ದತ್ತ ಅವರನ್ನು ಭಾನುವಾರ ಇಲ್ಲಿನ ನ್ಯಾಯಾಲಯ 14 ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೆಸ್ಸಿ ಮತ್ತು ಅವರ ತಂಡವನ್ನು ಹೈದರಾಬಾದ್‌ಗೆ ಬೀಳ್ಕೊಡಲು ಕೋಲ್ಕತ್ತ ವಿಮಾನ ನಿಲ್ದಾಣಕ್ಕೆ ತೆರಳಿದ್ದ ದತ್ತ ಅವರನ್ನು ಬಿಧಾನ್‌ನಗರ ಪೊಲೀಸರು ಶನಿವಾರ ಬಂಧಿಸಿದ್ದರು.

ನನ್ನ ಕಕ್ಷಿದಾರರ ವಿರುದ್ಧ ಸುಳ್ಳು ಆರೋಪ ಹೊರಿಸಲಾಗುತ್ತಿದೆ ಎಂದು ದತ್ತ ಅವರ ಪರ ಹಾಜರಾದ ವಕೀಲರು ನ್ಯಾಯಾಲಯಕ್ಕೆ ಅರುಹಿದರು. ಅಲ್ಲದೇ ಪೊಲೀಸ್ ತನಿಖೆಯಿಂದ ಮುಂದಿನ 14 ದಿನಗಳಲ್ಲಿ ಈ ಬಗ್ಗೆ ಸ್ಪಷ್ಟತೆ ಸಿಗಲಿದೆ ಎಂದು ಹೇಳಿದ್ದಾರೆ.

ದತ್ತ ಅವರನ್ನು ನ್ಯಾಯಾಲಯಕ್ಕೆ ಕರೆದೊಯ್ಯುವ ವೇಳೆ ಬಿಜೆಪಿಯ ಬೆಂಬಲಿಗರು ನ್ಯಾಯಾಲಯದ ಹೊರಗೆ ಪ್ರತಿಭಟನೆ ನಡೆಸಿದ್ದಾರೆ.

**ಘಟನೆಯ ಹಿನ್ನೆಲೆ**

ನಿರೀಕ್ಷೆಗಿಂತಲೂ ಮುಂಚಿತವಾಗಿಯೇ ಮೆಸ್ಸಿ ಕ್ರೀಡಾಂಗಣದಿಂದ ನಿರ್ಗಮಿಸಿದ್ದರಿಂದ ರೊಚ್ಚಿಗೆದ್ದ ಅಭಿಮಾನಿಗಳು ಪ್ರೇಕ್ಷಕರ ಗ್ಯಾಲರಿಯಲ್ಲಿನ ಕುರ್ಚಿಗಳನ್ನು ಧ್ವಂಸಗೊಳಿಸಿ, ಮೈದಾನದತ್ತ ಎಸೆದಿದ್ದಾರೆ. ನೂರಾರು ಜನರು ತಡೆಗೋಡೆಗಳನ್ನು ದಾಟಿ ಕ್ರೀಡಾಂಗಣಕ್ಕೆ ನುಗ್ಗಿ, ಪಿಚ್‌ಗೆ ಹಾನಿ ಮಾಡಿದ್ದಾರೆ. ಸಮೀಪದಲ್ಲಿಯೇ ಅಳವಡಿಸಿದ್ದ ಬ್ಯಾನರ್‌ಗಳು ಹಾಗೂ ಟೆಂಟ್‌ಗಳನ್ನು ಧ್ವಂಸಗೊಳಿಸಿದ್ದಾರೆ.

ಮೆಸ್ಸಿ ಅವರು ಕ್ರೀಡಾಂಗಣದಿಂದ ನಿರ್ಗಮಿಸಿದ ಬೆನ್ನಲ್ಲೇ, ದತ್ತ ಸೇರಿ ಇತರ ಆಯೋಜಕರು ಕೂಡ ಸ್ಥಳದಲ್ಲಿ ಕಾಣಲಿಲ್ಲ. ಇದು ಪರಿಸ್ಥಿತಿ ಮತ್ತಷ್ಟು ಹದಗೆಡಲು ಕಾರಣವಾಯಿತು ಎಂದು ಕೆಲ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

## ಬಿಜೆಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ನಿತಿನ್ ನಬಿನ್

• ಪ್ರಜೋದಯ ವರದಿ



**ನವದೆಹಲಿ:** ಬಿಜೆಪಿ ಸಂಸದೀಯ ಮಂಡಳಿಯು ಭಾನುವಾರ ನಿತಿನ್ ನಬಿನ್ ಅವರನ್ನು ಪಕ್ಷದ ಹೊಸ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಿದೆ.

ಪ್ರಸ್ತುತ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಅವಧಿ 2024ರಲ್ಲಿ ಕೊನೆಗೊಂಡಿತ್ತು. ಲೋಕಸಭೆ ಚುನಾವಣೆ ಹಿನ್ನಲೆಯಲ್ಲಿ ಅಧ್ಯಕ್ಷರನ್ನಾಗಿ ಅವರನ್ನೇ ಮುಂದುವರಿಸಲಾಗಿತ್ತು. ದಿಢೀರ್ ಬೆಳ ವಣಿಗೆಯಲ್ಲಿ ನಿತಿನ್ ನಬಿನ್ ಅವರನ್ನು ಕಾರ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಅವರನ್ನೇ ಆಯ್ಕೆ ಮಾಡಲಾಗುತ್ತದೆಂಬ ಚರ್ಚೆಗಳು ಜೋರಾಗಿವೆ.

ಬಿಹಾರ ಸರ್ಕಾರದಲ್ಲಿ ಕ್ಯಾಬಿನೆಟ್ ಸಚಿವರಾಗಿರುವ ನಬಿನ್ ಅವರ ನೇಮಕ ತಕ್ಷಣವೇ ಜಾರಿಗೆ ಬಂದಿದೆ ಎಂದು ಪಕ್ಷ ತಿಳಿಸಿದೆ. ಅಧ್ಯಕ್ಷರ ಚುನಾವಣೆ ನಿಗದಿಯಾಗುವ ಮೊದಲು ಪಕ್ಷವು ಹೊಸ ಪೂರ್ಣಾವಧಿ ಅಧ್ಯಕ್ಷರನ್ನು ಘೋಷಿಸದ ಹೊರತು, ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಪುದುಚೇರಿ ಯಲ್ಲಿ ಚುನಾವಣೆಗೆ ಸಜ್ಜಾಗುತ್ತಿರುವಾಗ ಪಕ್ಷವನ್ನು ವ್ಿುನ್ಡ್ಿಸ್ುವ್ ಕಾರ್ಯವನ್ನು ನಬಿನ್ ಹ್ಿಂದಿದ್ದ್ರ್. ಅಧ್ಯಕ್ಷರ ಅವಧಿ ತಲಾ 3 ವರ್ಷಗಳಾ ಗಿದ್ದು, ಸತತ ಎರಡು ಅವಧಿಗಳಿಗೆ ಇರಬಹುದಾಗಿದೆ. ರಾಷ್ಟ್ರೀಯ ಮಂಡಳಿ ಮತ್ತು ರಾಜ್ಯ ಮಂಡಳಿಗಳ ಸದಸ್ಯರು ಅಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ.

ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡುವ ಪ್ರಕ್ರಿಯೆಯು ಶೇ.50 ರಾಜ್ಯಗಳಲ್ಲಿ ಮಂಡಲ, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಸದಸ್ಯತ್ವ ಅಭಿಯಾನ ಮತ್ತು ಸಾಂಸ್ಥಿಕ ಚುನಾವಣೆಯೊಂದಿಗೆ ಪ್ರಾರಂಭವಾಗುತ್ತದೆ. ನಂತರ ಉಮೇದುವಾರಿಕೆಗೆ ಪ್ರಸ್ತಾವನೆಯನ್ನು ರಾಜ್ಯಗಳು ಮತ್ತು ಸಂಸದೀಯ ಪಕ್ಷವು ಮಾಡುತ್ತದೆ.

# ಭಗವಂತನ ಅನುಗ್ರಹವಿದ್ದರೆ ಎಲ್ಲವೂ ಸಾಧ್ಯ

## ಅಣತಿ ಲಕ್ಷ್ಮೀಕಾಂತಸ್ವಾಮಿ ದೇವಾಲಯ ಲೋಕಾರ್ಪಣೆಯಲ್ಲಿ ಶಾಸಕ ಬಾಲಕೃಷ್ಣ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಭಗವಂತನ ಅನುಗ್ರಹವಿಲ್ಲದೆ ಈ ಭೂಮಿಯ ಮೇಲೆ ಒಂದು ಹುಲ್ಲು ಕಡ್ಡಿಯು ಸಹ ಅಲುಗಾಡಲು ಸಾಧ್ಯವಿಲ್ಲ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಅಣತಿ ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಭಾರತ ದೇಶವು ಹಿಂದೂ ಧರ್ಮದ ತಳಹದಿಯ ಮೇಲೆ ನಿಂತಿದೆ ಎಂದರು.

ಕೆರೆಯ ಹಿಂಭಾಗದಲ್ಲಿರುವ ಶ್ರೀ ಸೋಮೇಶ್ವರ ದೇವಾಲಯದ ಪುನರ್ ನಿರ್ಮಾಣಕ್ಕೆ ಗ್ರಾಮಸ್ಥರ ಸಹಕಾರ ಹಾಗೂ ಗುರು–ಹಿರಿಯರ ಮಾರ್ಗ ದರ್ಶನದೊಂದಿಗೆ ಏಪ್ರಿಲ್ ತಿಂಗ ಳಲ್ಲಿ ಭೂಮಿ ಪೂಜೆ ನೆರವೇರಿಸಲಿದ್ದು 10 ಲಕ್ಷ ರೂ. ಅನುದಾನ ನೀಡಲಾಗುವುದು. ದೇಗುಲಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಕಾಂಕ್ರೀಟ್ ಹಾಗೂ ಚರಂಡಿ ವ್ಯವಸ್ಥೆಯೊಂದಿಗೆ ಅಭಿವೃದ್ಧಿಗೊಳಿಸಲಾಗುವುದು ಎಂದು ತಿಳಿಸಿದರು.

ಬೀಚಗೊಂಡನಹಳ್ಳಿ–ಕಾರೇಹಳ್ಳಿ ರಸ್ತೆಯ ಎರಡೂ ಬದಿಯನ್ನು ಒಂದು ಮೀಟರ್ ಅಗಲೀ ಕರಣ ಗೊಳಿಸಲಾಗುವುದು. ಅಣತಿ ಗ್ರಾಮದ ಮುಂಭಾಗದಲ್ಲಿ ಕಾರ್ಯಕ್ರಮಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಭಾಂಗಣ ನಿರ್ಮಾಣಗೊಳಿಸಲು ಯೋಜನೆ ರೂಪಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರತಿ ಬಾರಿಯ ವಿಧಾನಸಭಾ ಕಲಾಪದಲ್ಲಿ ತಾಲ್ಲೂಕಿನ ನೀರಾವರಿ ಯೋಜನೆ ಅನುಷ್ಠಾನ ಕುರಿತ ಧ್ವನಿ ಎತ್ತಿರುವ ಪರಿಣಾಮ ಹಂತ ಹಂತವಾಗಿ ತಾಲ್ಲೂಕನ್ನು ನೀರಾವರಿಗೊಳಿಸಲು ಸಹ ಕಾರಿಯಾಗಿದೆ. ಬಾಗೂರು ಹೋಬಳಿಯ ಸಂಪೂರ್ಣ ಕೆರೆಗಳಿಗೆ ನೀರು ತುಂಬಿಸಲಾಗಿದೆ. ಏತನೀರಾವರಿ ಯೋಜನೆಯಡಿ ಕೆರೆಕಟ್ಟೆಗಳಿಗೆ ನೀರು ತುಂಬಿಸಿದರೆ ವ್ಯಾಪ್ತಿಯ ಅಂತರ್ಜಲ ಚೇತರಿಕೆ ಕಾಣಲಿದ್ದು ರೈತರ ಬದುಕು ಸದೃಢವಾಗಲಿದೆ ಎಂದರು.

ಸಂಸದ ಶ್ರೇಯಸ್ ಎಂ.ಪಟೇಲ್ ಅವರ ತಾಯಿ ಅನುಪಮಾ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಶೇಖರ್, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ವೆಂಕಟೇಶ್, ಉದ್ಯಮಿ ಯೋಗೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ರಾಮಚಂದ್ರ, ಧರ್ಮದರ್ಶಿ ಗುಂಡೂರಾವ್, ಪ್ರಮುಖರಾದ ಶ್ರೀಧರ್, ಶಿವೇಗೌಡ, ಪ್ರಕಾಶ್ ಗೌಡ, ಕಾಂತರಾಜ್, ಎಂ.ಸಿ. ನಾಗೇಶ್, ಕೃಷ್ಣೇಗೌಡ, ಭೋಜಣ್ಣ ಹಾಗೂ ಇತರರು ಇದ್ದರು.

## ಕೇರಳದಲ್ಲಿ ಭುಗಿಲೆದ್ದ ಹಿಂಸಾಚಾರ

• ಪ್ರಜೋದಯ ವರದಿ

**ಕೇರಳ:** ಇಲ್ಲಿನ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶ ಹೊರಬಿದ್ದ ನಂತರ ರಾಜ್ಯದ ವಿವಿಧ ಸ್ಥಳಗಳಲ್ಲಿ ರಾತ್ರಿಯಿಡೀ ಹಿಂಸಾಚಾರ ನಡೆದಿದೆ.

ಕೋಯಿಕ್ಕೋಡ್ ಜಿಲ್ಲೆಯ ಎರಮಲದಲ್ಲಿ, ಕಾಂಗ್ರೆಸ್ ಕಚೇರಿ ಇಂದಿರಾ ಗಾಂಧಿ ಭವನದ ಮೇಲೆ ಸಿಪಿಐ(ಎಂ) ಕಾರ್ಯಕರ್ತರು ದಾಳಿ ನಡೆಸಿದ್ದಾರೆಂದು ಆರೋಪಿಸಲಾಗಿದೆ. ಬಳಿಕ ಈ ಪ್ರದೇಶದಲ್ಲಿ ರಾತ್ರಿಯಿಡೀ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆಯೆಂದು ಪೊಲೀಸರು ತಿಳಿಸಿದ್ದಾರೆ. ಸುಮಾರು 200 ಮಂದಿ ಅಪಾಯಕಾರಿ ಆಯುಧಗಳನ್ನು ಹಿಡಿದು ಕಾಂಗ್ರೆಸ್ ಕಚೇರಿಯ ಕಡೆಗೆ ಮೆರವಣಿಗೆ ನಡೆಸಿ ಕಟ್ಟಡ ಧ್ವಂಸಗೊಳಿಸಿದ್ದಾರೆ. ಅದರಿಂದಾಗಿ ಸುಮಾರು 5 ಲಕ್ಷ ರೂ. ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.

ದಾಳಿಯಲ್ಲಿ ದಿ|| ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಪ್ರತಿಮೆಗೂ ಹಾನಿಯಾಗಿದೆ. ಈ ಸಂಬಂಧ ಎಫ್ಐಆರ್ ದಾಖಲಾಗಿದೆ. ಘಟನೆಯ ಬಳಿಕ ಯುಡಿಎಫ್ ಕಾರ್ಯಕರ್ತರು ಜಮಾಯಿಸಿದ್ದು, ಪರಿಸ್ಥಿತಿ ಇನ್ನಷ್ಟು ಉದ್ವಿಗ್ನಗೊಂಡಿತು. ಆದಾಗ್ಯೂ, ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸುವುದರೊಂದಿಗೆ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲಾಯಿತು. ಯುಡಿಎಫ್ ವಿಜಯೋತ್ಸವ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆದಿದ್ದು, ಹಲವರು ಗಾಯಗೊಂಡಿದ್ದಾರೆ.



## ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಮತ್ತೆ ಒಂದಾದ ಜೋಡಿಗಳು



• ಪ್ರಜೋದಯ ವರದಿ

**ಹಾಸನ:** ಕೌಂಟುಂಬಿಕ ಕಲಹದಿಂದ ವಿಚ್ಛೇದನ ಹಂತಕ್ಕೆ ಬಂದಿದ್ದ ಐದು ಜೋಡಿಗಳನ್ನು ಒಂದುಗೂಡಿಸಿ ಸಹ ಜೀವನಕ್ಕೆ ಮತ್ತೊಂದು ಸುತ್ತಿನ ಮುನ್ನುಡಿ ಬರೆಯುವಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಯಶಸ್ವಿಯಾಗಿದೆ.

ನಗರದ ಜಿಲ್ಲಾ ನ್ಯಾಯಾಲಯದಲ್ಲಿ ಹಮ್ಮಿಕೊಂಡಿದ್ದ ಈ ವರ್ಷದ ಕೊನೆಯ ಮೆಗಾ ಲೋಕ ಅದಾಲತ್‌ನಲ್ಲಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು, ವಿಚ್ಛೇದನಕ್ಕಾಗಿ ನ್ಯಾಯಾಲಯ ಮೆಟ್ಟಿಲೇರಿದ್ದ ಐದು ಜೋಡಿಗಳಿಗೆ ಹಾರ ಬದಲಾಯಿಸಿ ಹಾಕಿ ಮನಸ್ತಾಪ ಮರೆತು ಒಟ್ಟಾಗಿ ಬಾಳುವಂತೆ ಕಿವಿಮಾತು ಹೇಳಿದರು. ಹಲವು ವರ್ಷಗಳಿಂದ ಬೇರೆ ಬೇರೆಯಾಗಿದ್ದ ಜೋಡಿಗಳು ಪರಸ್ಪರ ಒಟ್ಟಾಗುವ ಮೂಲಕ ನವ ಜೀವನದ ಸಂಕಲ್ಪ ಮಾಡಿದರು.

ಮಾಧವ್ ಮತ್ತು ಭಾವನ, ಸಂಜನಾ ಮತ್ತು ಲೋಕೇಶ್, ಸಕಲೇಶಪುರ ನ್ಯಾಯಾಲಯದ ಅಬ್ದುಲ್ ಮತ್ತು ನಸೀಮಾ ಹಾಗು ಅರಸೀಕೆರೆ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ತ್ರಿನೇತ್ರ ಮತ್ತು ನಯನ, ಕುಮಾರ್ ಮತ್ತು ನಂದಿನಿ ದಂಪತಿ ರಾಜಿ ಸಂಧಾನದ ಮೂಲಕ ಒಂದಾಗಿದ್ದು ಸಂತಸದೊಂದಿಗೆ ಮನೆಗೆ ತೆರಳಿದರು.

ಜಿಲ್ಲಾ ನ್ಯಾಯಾಧೀಶರಾದ ಹೇಮಾವತಿ ಅವರು ಮಾತನಾಡಿ, ಸಣ್ಣಪುಟ್ಟ ಮನಸ್ತಾಪದಿಂದ ಬೇರೆಯಾಗಲು ಮುಂದಾಗಿದ್ದ ಜೋಡಿಗಳನ್ನು ಒಂದು ಮಾಡಲಾಗಿದೆ. 33 ವರ್ಷಗಳಿಂದ ಬಾಕಿ ಉಳಿದಿದ್ದ ಆಸ್ತಿ ಸಂಬಂಧಿತ ವ್ಯಾಜ್ಯಕ್ಕೆ ರಾಜಿ ಸಂಧಾನದ ಮೂಲಕ ಪರಿಹಾರ ಕಂಡುಕೊಳ್ಳಲಾಗಿದೆಯೆಂದರು.

ಅದೇ ರೀತಿಯಲ್ಲಿ ಹಳೆಯ ಹಾಗೂ ದೀರ್ಘಕಾಲ ಬಾಕಿ ಉಳಿದಿರುವ ವ್ಯಾಜ್ಯಗಳನ್ನು ರಾಜಿ ಮೂಲಕ ಬಗೆಹರಿಸಿಕೊಂಡರೆ ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗಲಿದೆ. ಮುಂದಿನ ದಿನಗಳಲ್ಲಿ ರಾಜಿ ಸಂಧಾನದಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವವರ ಸಂಖ್ಯೆ ಹೆಚ್ಚಲಿಯೆಂದು ಆಶಿಸಿದರು.

ಜಿಲ್ಲಾದಾದ್ಯಂತ ನಡೆಸಲಾದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿದ್ದ 3,864 ಪ್ರಕರಣ ಮತ್ತು 5,99,326 ವ್ಯಾಜ್ಯಪೂರ್ವ ಪ್ರಕರಣ ಸೇರಿ 6,03,190 ಪ್ರಕರಣಗಳು ಮುಕ್ತಾಯಗೊಂಡಿವೆ ಎಂದು ಮಾಹಿತಿ ನೀಡಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ಇತರ ನ್ಯಾಯಾಧೀಶರು ಹಾಗು ವಕೀಲರು ಉಪಸ್ಥಿತರಿದ್ದರು.

## ಸತ್ಕಾರ್ಯಗಳು ನಮ್ಮನ್ನು ಭವಿಷ್ಯದಲ್ಲಿ ಕಾಪಾಡುತ್ತವೆ




• ಪ್ರಜೋದಯ ವರದಿ

**ಹಾಸನ:** ಇನ್ನೊಬ್ಬರಿಗೆ ಕೇಡು ಬಯಸದೆ ಸತ್ಕಾರ್ಯಗಳಲ್ಲಿ ತೊಡಗಿದರೆ ಭವಿಷ್ಯದಲ್ಲಿ ಅದರಿಂದ ಪ್ರಯೋಜನ ಖಂಡಿತ ಆಗುತ್ತದೆಂದು ಜಿಲ್ಲಾ ಏಡ್ಸ್ ನಿವಾರಣಾ ಸೊಸೈಟಿ ರವಿಕುಮಾರ್ ಬಲ್ಲೇನಹಳ್ಳಿ ಅವರು ಹೇಳಿದರು.

ನಗರದ ತವರು ಚಾರಿಟೆಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ತವರಿನ ಆಸರೆ ಉಚಿತ ಪೌಷ್ಟಿಕ ಆಹಾರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಸಮಾಜಮುಖಿ ಹಾಗು ಸೇವಾ ಚಟುವಟಿಕೆಗಳನ್ನು ಬ್ರ್ಯಾಂಡ್ ಮಾಡಿಕೊಂಡು ಪ್ರಚಾರ ಮಾಡುವವರ ಸಂಖ್ಯೆ ಹೆಚ್ಚಿದೆ. ತವರು ಚಾರಿಟೆಬಲ್ ಟ್ರಸ್ಟ್ ಯಾವ ಪ್ರಚಾರ ಬಯಸದೆ ಮೌನ ಸೇವೆಯ ಮೂಲಕ ಎಲೆಮರೆಕಾಯಂತೆ ತನ್ನದೇಯಾದ ಹೆಜ್ಜೆ ಗುರುತುಗಳನ್ನು ಮೂಡಿ ಸುತ್ತಿದೆಯೆಂದರು.

ಜೀವನದಲ್ಲಿ ಆತ್ಮತೃಪ್ತಿ ನೀಡುವಂತಹ ಸೇವಾ ಕಾರ್ಯ ಮಾಡಬೇಕು. ಸರ್ಕಾರಿ ಅನುದಾನ ಅಥವಾ ದೇಣಿಗೆಗಳನ್ನು ಪಡೆಯದೆ ಸ್ವಂತ ದುಡಿಮೆಯ ಹಣದಿಂದ ಸಮಾಜ ಸೇವೆಯಲ್ಲಿ ತೊಡಗಿರುವ ಡಾ.ಹೆಚ್.ಕೆ.ಪಾಲಾಕ್ಷ ಹಾಗು ಅವರ ಪತ್ನಿಯ ಸೇವೆ ಅಮೋಘವಾದುದು ಎಂದರು.

ನಿವೃತ್ತ ಪ್ರಾಧ್ಯಾಪಕಿ ಜಿ.ಎನ್. ಅನುಸೂಯ, ಜೀವನ ಆಶ್ರಯ ಸಂಸ್ಥೆ ಅಧ್ಯಕ್ಷ ರಂಗಸ್ವಾಮಿ, ತವರು ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಡಾ.ಹೆಚ್.ಕೆ.ಪಾಲಾಕ್ಷ, ಆರ್.ಕೆ. ಮಧುಪ್ರಿಯ ಇತರರಿದ್ದರು.

## ದೇಹವನ್ನು ಆರೋಗ್ಯವಾಗಿಟ್ಟುಕೊಳ್ಳಲು ಯೋಗ ಸಹಕಾರಿ

• ಪ್ರಜೋದಯ ವರದಿ

**ಆಲೂರು:** ದೇಹವನ್ನು ಆರೋಗ್ಯವಾಗಿಟ್ಟುಕೊಳ್ಳಲು ಯೋಗ ಉತ್ತಮ ಉಪಾಯ. ಯೋಗ ಮಾಡುವುದರಿಂದ ಮನಸ್ಸು ಮತ್ತು ದೇಹ ಎರಡನ್ನೂ ಆರೋಗ್ಯವಾಗಿ ಇಟ್ಟುಕೊಳ್ಳ ಬಹುದೆಂದು ಯೋಗ ಗುರು ಚೇತನ್ ಗೂರುಜಿ ಅವರು ಹೇಳಿದರು.

ಪಟ್ಟಣದಲ್ಲಿ ಲಯನ್ಸ್ ಕ್ಲಬ್ ಆಲೂರು ವತಿಯಿಂದ ಆಯೋಜಿಸಿದ್ದ ಆರೋಗ್ಯಕ್ಕಾಗಿ ಯೋಗ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಆರೋಗ್ಯವಂತ ವ್ಯಕ್ತಿಯಿಂದ ಜೀವನದಲ್ಲಿ ಎಲ್ಲವನ್ನು ಗಳಿಸಬಹುದು. ಆದ್ದರಿಂದ ಆರೋಗ್ಯದ ಕಡೆ ಹೆಚ್ಚು ಗಮನ ನೀಡಬೇಕು. ರಕ್ತದ ಒತ್ತಡ, ತೂಕ ಕಡಿಮೆ ಮಾಡಿಕೊಳ್ಳಲು, ಒತ್ತಡವನ್ನು ಕಡಿಮೆ ಮಾಡುವುದು, ಕೊಲೆಸ್ಟ್ರಾಲ್ ಅನ್ನು ಹತೋಟಿಯಲ್ಲಿ ಇಡುವಲ್ಲಿ ಯೋಗ ಸಕಾರಾತ್ಮಕವಾದ ಪರಿಣಾಮವನ್ನು ನೀಡುವುದರಿಂದ ಜಗತ್ತಿನಾದ್ಯಂತ ಎಲ್ಲರೂ ಇಷ್ಟಪಡುವ ಪ್ರಯೋಗ ಇದಾಗಿದೆ. ತೂಕ ಕಳೆದುಕೊಳ್ಳಲು ಮಾತ್ರವಲ್ಲ ಯೋಗವು ದೇಹವನ್ನು ಸಮ ತೂಕದಲ್ಲಿಟ್ಟು ದೃಢ ಮತ್ತು ಸುಂದರವಾಗಿರುವಂತೆ ನೋಡಿಕೊಳ್ಳುತ್ತದೆ. ಅದರೊಂದಿಗೆ ಯೋಗ ಮನಸ್ಸಿನ ಶಾಂತಿಯನ್ನು ಕಾಪಾಡಲು ಅತ್ಯುತ್ತಮ ಮಾರ್ಗ ಎಂದರು.



ಲಯನ್ಸ್ ಕ್ಲಬ್‌ನ ತಾಲ್ಲೂಕು ಅಧ್ಯಕ್ಷ ಬಿ.ಮಂಜೇಗೌಡ ಅವರು ಮಾತನಾಡಿ, ಮನುಷ್ಯ ಒತ್ತಡ ಮುಕ್ತನಾಗಿದ್ದಾಗ ಮಾತ್ರ ಆರೋಗ್ಯದಿಂದ ಬದುಕಲು ಸಾಧ್ಯ. ಉತ್ತಮ ಆರೋಗ್ಯ ಹಾಗೂ ಮನಸ್ಥಿತಿಗೆ ಪ್ರತಿನಿತ್ಯಯೋಗ ಮತ್ತು ಧ್ಯಾನ ಮಾಡುವುದು ಅತ್ಯವಶ್ಯಕ. ಯೋಗ ಮಾಡುವುದರಿಂದ ಸಾಕಷ್ಟು ಲಾಭಗಳಿವೆ. ಯೋಗ ಒಂದು ದಿನ ಮಾಡಿ ಬಿಡುವುದಲ್ಲ ಅದು ನಿರಂತರವಾಗಿ ಪ್ರತಿ ನಿತ್ಯ ನಡೆಯಬೇಕು. ತಮ್ಮ ಮನಸ್ಸನ್ನು ನಿಯಂತ್ರಿಸಿಕೊಂಡು ಜ್ಞಾನಾರ್ಜನೆ ಹೆಚ್ಚು ಮಾಡಿಕೊಳ್ಳಲು ಯೋಗಭ್ಯಾಸ ಕಲಿತು ಪ್ರತಿ ದಿನ ಮಾಡುವುದನ್ನು ರೂಢಿಸಿಕೊಳ್ಳಬೇಕೆಂದರು.

ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ರಘು ಪಾಳ್ಯ, ಗೌರವಾಧ್ಯಕ್ಷ ರೇಣುಕಾ ಪ್ರಸಾದ್, ಕೆ.ವಿ. ಮಲ್ಲಿಕಾರ್ಜುನ್, ಪ್ರದೀಪ್ ಯೋಗದಿಂದ ಆಗುವ ಪ್ರಯೋಜನಗಳ ಬಗ್ಗೆ ಮಾತನಾಡಿದರು. ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಆಶಾ ಮಲ್ಲಿಕಾರ್ಜುನ್, ಪ್ರಭು, ಚಂದ್ರು ಹಾಗೂ ಇತರರು ಇದ್ದರು.

## ಬ್ರಿಟನ್–ಈಜಿಪ್ಟ್ ವಿದೇಶಾಂಗ ಸಚಿವರ ಭೇಟಿಯಾದ ಜೈಶಂಕರ್

• ಪ್ರಜೋದಯ ವರದಿ

**ದುಬೈ:** ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಯೂರೋಪ್‌ನ ಕೆಲವು ದೇಶಗಳ ಮತ್ತು ಬ್ರಿಟನ್ ಹಾಗೂ ಈಜಿಪ್ಟ್‌ನ ವಿದೇಶಾಂಗ ಸಚಿವ ರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಜೈಶಂಕರ್ ಸೇರಿ ವಿವಿಧ ದೇಶಗಳ ವಿದೇಶಾಂಗ ಸಚಿವರು, ನಾಯಕರು ಮತ್ತು ನೀತಿ ನಿರೂಪಕರು ಮೂರು ದಿನಗಳ ಅಂತರರಾಷ್ಟ್ರೀಯ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ದುಬೈನಲ್ಲಿದ್ದಾರೆ.

ಲಕ್ಸಂಬರ್ಗ್‌ನ ಉಪ ಪ್ರಧಾನಿ ಮತ್ತು ವಿದೇಶಾಂಗಸಚಿವ ಕ್ಸೇವಿಯರ್ ಬೆಟೆಲ್, ಪೋಲೆಂಡ್‌ನ ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ ರೊಡೊ ಸ್ಲಾವ್ ಸಿಕೋರ್‌ಸ್ಕಿ ಹಾಗೂ ಲಾತ್ವಿಯದ ವಿದೇಶಾಂಗ ಸಚಿವ ಬೈಬಾ ಬ್ರೇಜ್ ಅವರನ್ನು ಭೇಟಿಯಾದೆ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ಬ್ರಿಟನ್‌ನ ಉಪ ಪ್ರಧಾನಿ ಡೇವಿಡ್ ಲ್ಯಾಮಿ ಮತ್ತು ಈಜಿಪ್ಟ್‌ನ ವಿದೇಶಾಂಗ ಸಚಿವ ಬದ್ರ್ ಅಬ್ದೆಲ್ಲತಿ ಅವರನ್ನೂ ಭೇಟಿಯಾದೆ ಎಂದು ಇನ್ನೊಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

# ಆರೋಗ್ಯಕರ ಜೀವನಕ್ಕೆ ವ್ಯಾಯಾಮ ರೂಢಿಸಿಕೊಳ್ಳಿ

• ಪ್ರಜೋದಯ ವರದಿ

**ಹಾಸನ:** ಆರೋಗ್ಯಕರ ಜೀವನಕ್ಕೆ ಪರಿಣಾಮಕಾರಿ ಕ್ರಮಗಳನ್ನು ಪಾಲಿಸುವ ಅಗತ್ಯವಿದ್ದು ನಿತ್ಯ ವ್ಯಾಯಾಮ, ಧ್ಯಾನ, ನಡಿಗೆಯಂತ ರೂಢಿ ಅಳವಡಿಸಿಕೊಳ್ಳಬೇಕೆಂದು ಡಾ||ಪದ್ಮ ಪ್ರಸಾದ್ ಅವರು ಸಲಹೆ ನೀಡಿದರು.

ನಗರದ ಹಾಸನ ಲಯನ್ಸ್ ಕ್ಲಬ್ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತ ನಾಡಿ, ದೈಹಿಕ ಹಾಗು ಮಾನಸಿಕ ಆರೋಗ್ಯ ಸುಧಾರಣೆಗೆ ನಡಿಗೆ ನೆರವಾಗುತ್ತದೆ. ಸ್ನೇಹಿತರ ಭೇಟಿಯಿಂದ ಮನಸ್ಸು ಪ್ರಫುಲ್ಲವಾಗುತ್ತದೆ. ಬೆಳ್ಳಂ ಬೆಳಿಗ್ಗೆ ಪ್ರಕೃತಿ ಸೌಂದರ್ಯ ಸವಿಯ ಬಹುದು. ಮನುಷ್ಯ ಆಲಸ್ಯವನ್ನು ದೂರ ಮಾಡಬೇಕು. ನಿಶ್ಚಿತ ಗುರಿಯೊಂದಿಗೆ ಸಾಗಿದರೆ ಬೆಳಿಗ್ಗೆ ಬೇಗ ಎದ್ದೇಳುವುದು ಕಷ್ಟದ ಕೆಲಸವಲ್ಲ. ರಕ್ತದೊತ್ತಡ ಹಾಗು ಮಧು ಮೇಹ ಸಮಸ್ಯೆ ಯಿರುವವರು ಪ್ರತಿದಿನ ಕನಿಷ್ಟ ಅರ್ಧ ಗಂಟೆ ವಾಕಿಂಗ್ ಮಾಡಬೇಕೆಂದು ಹೇಳಿದರು.

ಹಿತ ಮಿತ ಆಹಾರ ರೂಢಿಸಿಕೊಳ್ಳಬೇಕು. ಸಿಹಿ ಪದಾರ್ಥಗಳ ಸೇವನೆ ಕಡಿಮೆ ಮಾಡಬೇಕು. ಪೌಷ್ಟಿಕ ಆಹಾರಕ್ಕೆ ಆದ್ಯತೆ ನೀಡಬೇಕು. ಒಬ್ಬ ವ್ಯಕ್ತಿ ದಿನಕ್ಕೆ 14 ಸಾವಿರ ಹೆಜ್ಜೆ ಅಂದರೆ ಕನಿಷ್ಟ 4 ಕಿ.ಮೀ. ನಡೆಯುವ ಅಭ್ಯಾಸ ಮಾಡಿಕೊಳ್ಳಬೇಕೆಂದರು.



ಮನುಷ್ಯ ಒತ್ತಡಕ್ಕೆ ಒಳಗಾಗಬಾರದು. ದಿಢೀರ್ ಶ್ರೀಮಂತನಾಗಬೇಕೆಂಬ ದುರಾಸೆಯಿಂದ ವಿಶ್ರಾಂತಿ ಇಲ್ಲದೆ ಕೆಲಸ ಮಾಡುವುದು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಉತ್ತಮ ನಿದ್ರೆ ಆಯಸ್ಸು ಹೆಚ್ಚಿಸುತ್ತದೆ. ಉತ್ತಮರ ಸ್ನೇಹ, ಸಕಾರಾತ್ಮಕ ಚಿಂತನೆ ಹಾಗು ಕುಟುಂಬದೊಂದಿಗೆ ಸಮಯ ಕಳೆಯುವುದು ಆರೋಗ್ಯ ವೃದ್ಧಿಗೆ ಸಹಕಾರಿಯಾಗುತ್ತದೆಂದರು.

ಇತ್ತೀಚೆಗೆ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿದ್ದು ಕುಟುಂಬದಲ್ಲಿ ಯಾರಿಗಾದರೂ ಕಾಯಿಲೆ ಇದ್ದರೆ ಅಂತವರು ಕಡ್ಡಾಯವಾಗಿ ತಪಾಸಣೆ ಮಾಡಿಸಿಕೊಳ್ಳಬೇಕು. ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಘೋರ ಪರಿಣಾಮ ಎದುರಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸಿ.ಕೆ.ಕಿರಣ್ ಕುಮಾರ್, ರಾಜು, ರುಕೇಶ್ ಹಾಗು ರಾಮಚಂದ್ರ, ಪೊಲೀಸ್ ಇಲಾಖೆಯ ಮಂಜಪ್ಪ, ಸಿ.ಬಿ.ನಾಗರಾಜು, ರಂಗೇಗೌಡ ಹಾಗು ಭಾರತೀಯ ಸ್ಕೌಟ್ ಅಂಡ್ ಗೈಡ್ಸ್‌ನ ಆರ್.ಜಿ.ಗಿರೀಶ್, ಕಾಂಚನಾಮಾಲಾ, ವನಜಾ ಅವರನ್ನು ಸನ್ಮಾನಿಸಲಾಯಿತು.

ಲಯನ್ಸ್ ಕ್ಲಬ್ ಅಧ್ಯಕ್ಷ ಹೆಚ್. ರಮೇಶ್, ಕಾರ್ಯದರ್ಶಿ ಸಿ.ಶಿವಸ್ವಾಮಿ, ಖಜಾಂಚಿ ಚನ್ನೇಗೌಡ, ಜಿಲ್ಲಾ ಸಂಪುಟ ಕಾರ್ಯದರ್ಶಿ ಹೆಚ್.ಆರ್. ಚಂದ್ರೇಗೌಡ, ವಲಯ ಅಧ್ಯಕ್ಷ ಹೆಚ್.ಕೆ.ನಾಗೇಶ್, ಮಾಜಿ ಅಧ್ಯಕ್ಷ ಐ.ಜಿ. ರಮೇಶ್, ಗಂಗಾಧರ್, ಮಲ್ಲೇಶ್‌ಗೌಡ, ನಾಗರಾಜು ಇತರರು ಹಾಜರಿದ್ದರು.

## ಮಹಿಳೆಯರು, ಎಸ್‌ಸಿ, ಎಸ್‌ಟಿಗೆ ಆದ್ಯತೆ ನೀಡಿ

**ನವದೆಹಲಿ:** ಕೇಂದ್ರದ ಮಹತ್ವದ ಹುದ್ದೆಗಳಿಗೆ ನೇಮಕಾತಿಗಾಗಿ ಅಧಿಕಾರಿಗಳ ಹೆಸರುಗಳನ್ನು ಶಿಫಾರಸು ಮಾಡುವ ವೇಳೆ ಮಹಿಳೆಯರು, ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳಿಗೆ (ಎಸ್‌ಟಿ) ಸೇರಿದವರಿಗೆ ಆದ್ಯತೆ ನೀಡಿ ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸೂಚನೆ ನೀಡಿದೆ.

ಕೇಂದ್ರ ಸೇವೆಗಳಲ್ಲಿ ಮಹಿಳೆಯರು, ಎಸ್‌ಸಿ ಮತ್ತು ಎಸ್‌ಟಿ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಸಿಗಬೇಕು ಎನ್ನುವ ದೃಷ್ಟಿಯಿಂದ ಈ ಸೂಚನೆ ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಬಗ್ಗೆ ಕೇಂದ್ರ ಸಿಬ್ಬಂದಿ ಸಚಿವಾಲಯವು ಎಲ್ಲಾ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳಿಗೆ ಡಿ.10ರಂದು ಪತ್ರ ಬರೆದಿದೆ.

ಕೇಂದ್ರದ ಸರ್ಕಾರಿ ಸ್ವಾಮ್ಯದ ಉದ್ಯಮಗಳು (ಸಿಪಿಎಸ್‌ಇ) ಸೇರಿ ಹಲವು ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನು ತಡೆಯುವ ಸಲುವಾಗಿ ಇರುವ ಮುಖ್ಯ ವಿಚಕ್ಷಣ ಅಧಿಕಾರಿ (ಸಿವಿಒ) ಹುದ್ದೆಗಳಿಗೆ ಕೇಂದ್ರ ಸಿಬ್ಬಂದಿ ಯೋಜನೆ (ಸಿಎಸ್‌ಎಸ್) ಅಡಿಯಲ್ಲಿ ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗುತ್ತದೆ.

## ಸಿಡ್ನಿ ಬೀಚ್‌ನಲ್ಲಿ ಗುಂಡಿನ ದಾಳಿ: 12 ಜನರ ಸಾವು

• ಪ್ರಜೋದಯ ವರದಿ



**ಸಿಡ್ನಿ:** ಆಸ್ಟ್ರೇಲಿಯಾದ ಸಿಡ್ನಿ ಬೀಚ್‌ನಲ್ಲಿ ನಡೆದ ಸಾಮೂಹಿಕ ಗುಂಡಿನ ದಾಳಿಯಲ್ಲಿ 12 ಜನರು ಮೃತಪಟ್ಟು ಹಲವರು ಗಾಯಗೊಂಡಿರುವ ಘಟನೆ ಭಾನುವಾರ ಸಂಜೆ ನಡೆದಿದೆ.

ಇಲ್ಲಿನ ಬಾಂಡಿ ಬೀಚ್‌ನಲ್ಲಿ ಸಂಜೆ 6.30ರ ಸುಮಾರಿಗೆ ಬಂದೂಕುದಾರಿಗಳು ಸಮುದ್ರ ತೀರದಲ್ಲಿದ್ದ ಜನರ ಮೇಲೆ ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ. ಈ ವೇಳೆ 12 ಜನರು ಮೃತಪಟ್ಟಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

ಯಹೂದಿಗಳು ಒಂದು ವಾರ ಆಚರಣೆ ಮಾಡುವ ಹನುಕ್ಕಾ ಹಬ್ಬದ ಮೊದಲ ದಿನವೇ ಈ ಘಟನೆ ನಡೆದಿದೆ. ಈ ಹಬ್ಬದ ಸಂಭ್ರಮಕ್ಕಾಗಿ ಸಾವಿರಾರು ಜನರು ಬೀಚ್‌ನಲ್ಲಿ ಸೇರಿದ್ದರು. ಘಟನೆ ಕುರಿತು ಆಸ್ಟ್ರೇಲಿಯಾದ ಪ್ರಧಾನಿ ಆಂಥೋನಿ ಅಲ್ಬನೀಸ್ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ.

ಬೀಚ್‌ನಲ್ಲಿ ಕಂಡ ದೃಶ್ಯಗಳು ಅತ್ಯಂತ ಆಘಾತಕಾರಿ ಹಾಗೂ ಮನ ಕಲಕುವಂತಿವೆ. ಜನರನ್ನು ಉಳಿಸಲು ಪೊಲೀಸರು ಮತ್ತು ತುರ್ತು ಸೇವಾ ಸಿಬ್ಬಂದಿ ಸ್ಥಳದಲ್ಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಪ್ರದೇಶದಲ್ಲಿರುವ ಜನರು ಪೊಲೀಸರ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಅವರು ನಾಗರಿಕರಿಗೆ ಸೂಚನೆ ನೀಡಿದ್ದಾರೆ.

ಗುಂಡಿನ ದಾಳಿ ನಡೆಸಿದ ದುಷ್ಕರ್ಮಿಗಳ ಪೈಕಿ ಒಬ್ಬನನ್ನು ಪೊಲೀಸರು ಬಂಧಿಸಿದ್ದು, ಮತ್ತೊಬ್ಬ ಮೃತಪಟ್ಟಿದ್ದಾನೆಂದು ಪೊಲೀಸರು ಹೇಳಿದ್ದಾರೆ. ಹಂತಕರು ಈ ಪ್ರದೇಶದಲ್ಲಿ ಅಡಗಿರುವ ಶಂಕೆ ಇದ್ದು ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

# ಮತಗಳ್ಳತನ ವಿರುದ್ಧ ಕಾಂಗ್ರೆಸ್ ರಣ ಕಹಳೆ

## ಕೇಂದ್ರದ ವಿರುದ್ಧ ರಾಹುಲ್ ಗಾಂಧಿ ಗುಡುಗು | ಚುನಾವಣಾ ಆಯುಕ್ತರ ವಿರುದ್ಧವೂ ಕಿಡಿ

• ಪ್ರಜೋದಯ ವರದಿ

**ನವದೆಹಲಿ:** ಮತಗಳ್ಳತನ ಹಾಗು ಮತದಾರರ ವಿಶೇಷ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ ಕೇಂದ್ರ ಚುನಾವಣಾ ಆಯೋಗ-ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ನೇತೃತ್ವದ ಇಂಡಿ ಒಕ್ಕೂಟ ಭಾನುವಾರ ನವದೆಹಲಿಯಲ್ಲಿ ರಣ ಕಹಳೆ ಮೊಳಗಿಸಿತು.

ರಾಮಲೀಲಾ ಮೈದಾನದಲ್ಲಿ ನಡೆದ ರ್‍ಯಾಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಕೆ.ಸಿ. ವೇಣುಗೋಪಾಲ್, ಜೈರಾಮ್ ರಮೇಶ್, ಸಚಿನ್ ಪೈಲಟ್, ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು ಹಾಗು ಪದಾಧಿಕಾರಿಗಳು ಭಾಗವಹಿಸಿದ್ದರು. ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಂಸದ ರಾಹುಲ್ ಗಾಂಧಿ ಅವರು ಮಾತನಾಡಿ, ಬಿಜೆಪಿ ಅಧಿಕಾರದಲ್ಲಿದ್ದಾಗ ಮಾತ್ರ ಧೈರ್ಯ ತೋರಿಸುತ್ತದೆ. ಗೃಹ ಸಚಿವ ಅಮಿತ್ ಶಾ ಅವರು ಸಂಸತ್ತಿನಲ್ಲಿ ನಡುಗುವ ಕೈಗಳಿಂದ ಸ್ಪಷ್ಟನೆ ನೀಡಿದರು. ನನ್ನ ಸುದ್ದಿಗೋಷ್ಠಿಯಲ್ಲಿ ಚರ್ಚೆಗೆ ಅವರಿಗೆ ನಾನು ಸವಾಲು ಹಾಕಿದ್ದೇನೆ. ಯಾರು ಸತ್ಯ ಮಾತನಾಡುತ್ತಾರೆಂಬುದನ್ನು ದೇಶಕ್ಕೆ ತೋರಿಸೋಣ. ಅವರ ನಡುಗುವ ಕೈಗಳನ್ನು ನೀವು ನೋಡಿದ್ದೀರಾ. ಅವರು ಯಾಕೆ ನಡುಗುತ್ತಿದ್ದರೆಂದು ನನಗೆ ಗೊತ್ತು ಎಂದು ಕಿಚಾಯಿಸಿದರು. ಕರ್ನಾಟಕ, ಹರಿಯಾಣ ಮತ್ತು ಮಹಾರಾಷ್ಟ್ರದಲ್ಲಿ ವ್ಯವಸ್ಥಿತವಾಗಿ ಮತ ಕಳ್ಳತನ ಕುರಿತು ಅವರ ಮೂರು ಸುದ್ದಿಗೋಷ್ಠಿಗಳ ಬಗ್ಗೆ ಚರ್ಚೆ ನಡೆಸುವಂತೆ ರಾಹುಲ್ ಗಾಂಧಿ ಲೋಕಸಭೆಯಲ್ಲಿ ಸವಾಲು ಹಾಕಿದ್ದರೆ, ಅಮಿತ್ ಶಾ, ಚುನಾವಣಾ ಆಯೋಗ ಮತ್ತು ಬಿಜೆಪಿ ಮೇಲೆ ಕಾಂಗ್ರೆಸ್ ಮಾಡಿದ ಆರೋಪಗಳಿಗೆ ಉತ್ತರಿಸಿದರು. ರಾಹುಲ್ ಟೀಕೆಗಳಿಗೆ ಉತ್ತರಿಸಿದ್ದ ಅಮಿತ್ ಶಾ, ನಿಮ್ಮ ಹಠದಿಂದ ಸಂಸತ್ತನ್ನು ನಡೆಸಲು ಸಾಧ್ಯವಿಲ್ಲ. ತಾಳ್ಮೆಯಿಂದಿರಬೇಕೆಂದು ಹೇಳಿದ್ದರು ಎಂದರು.



### ಆಯುಕ್ತರ ವಿರುದ್ಧ ಕ್ರಮ ಖಚಿತ

ಕಾಂಗ್ರೆಸ್ ಅಧಿಕಾರಕ್ಕೆ ಮರಳಿದ ನಂತರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಚುನಾವಣಾ ಆಯುಕ್ತ ಸುಖಬೀರ್ ಸಂಧು ಮತ್ತು ವಿವೇಕ್ ಜೋಶಿ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ರಾಹುಲ್ ಪ್ರತಿಭಟನೆಯಲ್ಲಿ ಪ್ರತಿಜ್ಞೆ ಮಾಡಿದರು.

ಈ ಮೂವರ ಹೆಸರುಗಳನ್ನು ನೆನಪಿಡಿ. ಚುನಾವಣಾ ಆಯೋಗವು ಬಿಜೆಪಿಯೊಂದಿಗೆ ಕೆಲಸ ಮಾಡುತ್ತಿದೆ. ನರೇಂದ್ರ ಮೋದಿ ಅವರಿಗಾಗಿ ಕಾನೂನನ್ನು ಬದಲಾಯಿಸಿದ್ದಾರೆ. ಚುನಾವಣಾ ಆಯುಕ್ತರು ಏನೇ ಮಾಡಿದ್ದರೂ ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ನಾವು ಈ ಕಾನೂನನ್ನು ಬದಲಾಯಿಸುತ್ತೇವೆ ಮತ್ತು ನಿಮ್ಮ ವಿರುದ್ಧ ಕ್ರಮ ಕೈಗೊಳ್ಳುತ್ತೇವೆಂದು ಎಚ್ಚರಿಕೆ ನೀಡಿದರು.

### ಹೋರಾಟದ ಹಿಂದೆ ರಾಜಕೀಯ ಉದ್ದೇಶವಿಲ್ಲ

ದೇಶದ 140 ಕೋಟಿ ಜನರ ಮತದಾನದ ಹಕ್ಕು ಉಳಿಸಲು ನಾವು ಮತಕಳ್ಳತನದ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಇದರಲ್ಲಿ ರಾಜಕೀಯ ಉದ್ದೇಶವಿಲ್ಲವೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಹುಲ್ ಗಾಂಧಿ ಹಾಗು ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಾವು ಮತಕಳ್ಳತನ ವಿರುದ್ಧದ ಹೋರಾಟ ಆರಂಭಿಸಿದ್ದೆವು. ಈಗ ರಾಮಲೀಲಾ ಮೈದಾನದಲ್ಲಿ ಪ್ರತಿಭಟನೆ ಮಾಡುತ್ತಿದ್ದೇವೆ. ಈ ದೇಶದಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸಬೇಕೆಂಬ ಸಂದೇಶ ನೀಡಲಾಗುತ್ತಿದೆ. ದೇಶದ ಚುನಾವಣೆಗಳು ಈಗ ನ್ಯಾಯ ಸಮ್ಮತವಾಗಿಲ್ಲ. ಮತಕಳ್ಳತನ ಮಾಡಲಾಗುತ್ತಿದೆ. ರಾಹುಲ್ ಗಾಂಧಿ ಅವರು ಈ ವಿಚಾರವಾಗಿ ಸಂಸತ್ತಿನಲ್ಲಿ ಧ್ವನಿ ಎತ್ತಿದ್ದಾರೆ. ಇನ್ನು ಹಲವು ಬಾರಿ ಮಾಧ್ಯಮಗೋಷ್ಠಿ ಮೂಲಕ ದಾಖಲೆಗಳನ್ನು ಬಹಿರಂಗಗೊಳಿಸಿದ್ದಾರೆ. ಇಷ್ಟಾದರೂ ಚುನಾವಣಾ ಆಯೋಗದಿಂದ ಸರಿಯಾದ ಉತ್ತರ ಸಿಗುತ್ತಿಲ್ಲ. ಹೀಗಾಗಿ ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆ ಬಗ್ಗೆ ಜನರಿಗೆ ಅರಿವು ಮೂಡಿಸಲು ನಾವು ಬೀದಿಗಿಳಿದು ಹೋರಾಟ ಮಾಡುತ್ತಿದ್ದೇವೆಂದು ತಿಳಿಸಿದರು.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಹೇಳಿಕೆಯನ್ನು ಉಲ್ಲೇಖಿಸುವ ಮೂಲಕ ಕಾಂಗ್ರೆಸ್ ಮತ್ತು ಆರೆಸ್ಸೆಸ್ ಸಿದ್ಧಾಂತಗಳಲ್ಲಿನ ವ್ಯತ್ಯಾಸಗಳನ್ನು ರಾಹುಲ್ ಗಾಂಧಿ ಸೂಚಿಸಿದರು. ಆರ್‌ಎಸ್‌ಎಸ್ ಮುಖ್ಯಸ್ಥ ಡಾ.ಮೋಹನ್ ಭಾಗವತ್ ಅವರ ಹೇಳಿಕೆಯನ್ನು ಕೇಳಿ ಜಗತ್ತು ಸತ್ಯದತ್ತ ನೋಡುವುದಿಲ್ಲ. ಅಧಿಕಾರವನ್ನು ನೋಡುತ್ತದೆ. ಯಾರಿಗೆ ಅಧಿಕಾರವಿದೆಯೋ ಅವರನ್ನು ಗೌರವಿಸುತ್ತದೆ. ಇದು ಮೋಹನ್ ಭಾಗವತ್ ಅವರ ಚಿಂತನೆಯಾಗಿದೆ. ಈ ಸಿದ್ಧಾಂತ ಆರ್‌ಎಸ್‌ಎಸ್‌ನದ್ದು. ನಮ್ಮ ಸಿದ್ಧಾಂತ, ಭಾರತದ ಸಿದ್ಧಾಂತ. ಹಿಂದೂ ಧರ್ಮದ ಸಿದ್ಧಾಂತ, ವಿಶ್ವದ ಪ್ರತಿಯೊಂದು ಧರ್ಮದ ಸಿದ್ಧಾಂತವು ಸತ್ಯವಾಗಿದೆ ಎಂದು ಹೇಳುತ್ತದೆ. ಸತ್ಯವನ್ನು ಎತ್ತಿಹಿಡಿಯುವ ಮೂಲಕ, ಸತ್ಯದ ಹಿಂದೆ ನಿಲ್ಲುವ ಮೂಲಕ, ನರೇಂದ್ರ ಮೋದಿ ಮತ್ತು ಆರ್‌ಎಸ್‌ಎಸ್ ಸರ್ಕಾರ ಅಮಿತ್ ಶಾ ಅವರನ್ನು ದೇಶದಿಂದ ಕಿತ್ತೊಗೆಯುತ್ತೇವೆಂಬ ಗ್ಯಾರಂಟಿ ನೀಡುತ್ತೇನೆಂದು ರಾಹುಲ್ ಗಾಂಧಿ ಗುಡುಗಿದರು.

# ಹಾಸನದಲ್ಲಿ 8.3 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದ ತಾಪಮಾನ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ದಿನದಿಂದ ದಿನಕ್ಕೆ ತಾಪಮಾನ ಕುಸಿತ ಕಾಣುತ್ತಿದ್ದು, ಶೀತ ಗಾಳಿ, ಚಳಿಗೆ ಜನರು ಹೈರಾಣಾಗಿದ್ದಾರೆ. ಹಾಸನದಲ್ಲಿ ಭಾನುವಾರ ತಾಪಮಾನ 8.3 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿತ್ತು.

ಭಾನುವಾರ ಬೆಳಿಗ್ಗೆ ರಾಜ್ಯದ 21 ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ 10 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ದಾಖಲಾಗಿದೆ. ಡಿ. 18ರ ವರೆಗೆ ಥಂಡಿ ಗಾಳಿ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಶನಿವಾರ ರಾತ್ರಿಯಿಂದ ಭಾನುವಾರ ಬೆಳಿಗ್ಗೆ ವರೆಗೂ ಜಿಲ್ಲಾ ಕೇಂದ್ರಗಳಲ್ಲಿ ದಾಖಲಾದ ಕನಿಷ್ಠ ತಾಪಮಾನ ವಿವರವನ್ನು ಹವಾಮಾನ ಇಲಾಖೆ ಹಂಚಿಕೊಂಡಿದೆ. ಬೀದರ್‌ನಲ್ಲಿ ಅತಿ ಕಡಿಮೆ ತಾಪಮಾನ ದಾಖಲಾಗಿದೆ.

ಬೀದರ್ 7, ಚಿಕ್ಕಬಳ್ಳಾಪುರ 7.1, ಧಾರವಾಡ 7.4, ತುಮಕೂರು 7.4, ಚಿಕ್ಕಮಗಳೂರು 7.6, ಬೆಳಗಾವಿ 7.8 ಡಿಗ್ರಿ ಸೆಲ್ಸಿಯಲ್ ತಾಪಮಾನ ದಾಖಲಾಗಿದೆ. ಅದೇ ರೀತಿ ಹಾಸನದಲ್ಲಿ 8.3, ಕೊಡಗು 8.5, ಬಾಗಲಕೋಟೆ 8.6, ಹಾವೇರಿ 8.7, ಮೈಸೂರು 8.8, ವಿಜಯನಗರ 8.8, ಗದಗ 9, ವಿಜಯಪುರ 9.3, ಕಲಬುರಗಿ 9.4, ಮಂಡ್ಯ 9.7, ಉತ್ತರ ಕನ್ನಡ 9.8, ಕೋಲಾರ 9.9, ಕೊಪ್ಪಳ 9.9, ಚಾಮರಾಜನಗರ 10, ಶಿವಮೊಗ್ಗಾ 10, ಬಳ್ಳಾರಿ 10.1, ಬೆಂಗಳೂರು ದಕ್ಷಿಣ 10.1, ಚಿತ್ರದುರ್ಗ 10.2, ದಾವಣಗೆರೆ 10.2, ರಾಯಚೂರು 10.2, ಬೆಂಗಳೂರು ಗ್ರಾಮಾಂತರ 10.4, ಬೆಂಗಳೂರು ನಗರ 10.8, ಯಾದಗಿರಿ 11.4, ಉಡುಪಿ 14.4, ದಕ್ಷಿಣ ಕನ್ನಡ 15.5 ಡಿಗ್ರಿ ಸೆಲ್ಸಿಯಸ್ ತಾಪಮಾನ ವರದಿಯಾಗಿದೆ.



### ಉತ್ತರ ಕರ್ನಾಟಕದಲ್ಲಿ ಭಾರೀ ಚಳಿ

ಉತ್ತರ ಕರ್ನಾಟಕದ ಜನರು ಈ ಬಾರಿಯ ಚಳಿಗಾಲಕ್ಕೆ ಅಕ್ಷರಶಃ ಥಂಡಾ ಹೊಡೆದಿದ್ದಾರೆ. ವಾರದಿಂದ ಬೀಸುತ್ತಿರುವ ತಂಪು ಗಾಳಿ ಜನರನ್ನು ಕಂಗೆಡಿಸಿದೆ. ಬೀದರ್, ವಿಜಯಪುರ, ಬೆಳಗಾವಿ ಯಲ್ಲಿ ಈ ಬಾರಿ ಬಿಸಿಲಿಗಿಂತ ಚಳಿ ಪ್ರಖರವಾಗಿದೆ. ಹವಾಮಾನ ಬದಲಾವಣೆಯಿಂದ ಬಯಸೀಮೆ ಜಿಲ್ಲೆ ಗಳಲ್ಲಿ ಶೀತ ಗಾಳಿ ಆವರಿಸಿದೆ. ಜೋರು ಚಳಿಯಿಂದಾಗಿ ಜನರು ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿದ್ದಾರೆ. ಬೆಳಿಗ್ಗೆ 9 ಗಂಟೆ ವರೆಗೂ ಶೀತ ಗಾಳಿ ಬೀಸುತ್ತಿದ್ದು ಶಾಲಾ ಕಾಲೇಜು ಮಕ್ಕಳು, ಉದ್ಯೋಗಿಗಳು ನಲುಗಿದ್ದಾರೆ. ಸಂಜೆ 5 ಗಂಟೆಯಾಗುತ್ತಿದ್ದಂತೆ ಚಳಿ ಅನುಭವವಾಗುತ್ತದೆ.

# ಚಿನ್ನದ ಸರ ಕಳವು

ಹೊಳೆನರಸೀಪುರ: ಬಸ್ ಹತ್ತುವಾಗ ಮಹಿಳೆ ಗಮನಕ್ಕೆ ಬಾರದಂತೆ 25 ಗ್ರಾಂ ತೂಕದ ಮಾಂಗಲ್ಯ ಸರ ದೋಚಿರುವ ಘಟನೆ ಬಸ್ ನಿಲ್ದಾಣದಲ್ಲಿ ಇತ್ತೀಚೆಗೆ ನಡೆದಿದೆ.

ಅರಕಲಗೂಡಿನ ಪ್ರಮೀಳಾ ಎಂಬುವವರ ಸರ ಕಳ್ಳತನವಾಗಿದೆ. ಡಿ.13 ರಂದು ನಂಜನಗೂಡು ದೇವಸ್ಥಾನದಿಂದ ಬಸ್‌ನಲ್ಲಿ ಬಂದಿದ್ದ ಅವರು ಪಟ್ಟಣದ ಬಸ್ ನಿಲ್ದಾಣದಲ್ಲಿ ಅರಕಲಗೂಡಿಗೆ ತೆರಳುವ ಬಸ್ ಹತ್ತುವಾಗ ಕೃತ್ಯ ಎಸಗಿದ್ದಾರೆ.

ಬಸ್ ಹತ್ತಲು ಸಾಕಷ್ಟು ಸಂಖ್ಯೆಯಲ್ಲಿ ಜನರಿದ್ದರಿಂದ ಮೊದಲು ಪ್ರಮೀಳಾ ಅವರ ಮಕ್ಕಳು ಏರಿ ಸೀಟು ಹಿಡಿದು ಕುಳಿತಿದ್ದರು. ನಂತರ ಸೀಟ್ ಮೇಲೆ ಕುಳಿತು ನೋಡಿಕೊಂಡಾಗ ಸರ ಇಲ್ಲದಿರುವುದು ಗೊತ್ತಾಗಿದೆ. ಅಂದಾಜು 2.80 ಲಕ್ಷ ರೂ. ಮೌಲ್ಯದ ಸರ ಕಳುವಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಿರಂತರವಾಗಿ ಕಲಿಯುವ ಗುಣ ಬೆಳೆಸಿಕೊಳ್ಳಿ

» ಮೊದಲನೇ ಪುಟದಿಂದ

ದೇಶದ ಜಿಡಿಪಿಗೆ ಹೆಚ್ಚು ಕೊಡುಗೆ ನೀಡುವಂತಾಗಬೇಕು. ಉದ್ಯೋಗದಲ್ಲಿ ಮುಂದುವರೆಯಲು ಬಯಸುವ ವಿದ್ಯಾರ್ಥಿನಿಯರ ಎದುರು ಸಾಕಷ್ಟು ಸವಾಲುಗಳಿರುವುದು ವಾಸ್ತವ. ಆ ಸವಾಲುಗಳನ್ನು ಮೆಟ್ಟಿನಿಂತು ಉದ್ಯೋಗ ಕ್ಷೇತ್ರದಲ್ಲಿ ಮುಂದುವರೆಯಬೇಕೆಂದು ವಿದ್ಯಾರ್ಥಿನಿಯರಿಗೆ ತಿಳಿ ಹೇಳಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಅವರು ಮಾತನಾಡಿ, ಹೆಚ್ಚಿನ ಸಾಧನೆ ಮಾಡುವ ಮೂಲಕ ಕಲಿಸಿದ ಪ್ರಾಧ್ಯಾಪಕರು ಹಾಗೂ ಸಂಸ್ಥೆಗೆ ಉತ್ತಮ ಹೆಸರು ತನ್ನಿ ಎಂದರು. ಕಾಲೇಜಿನ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದ ಡೀನ್ ಡಾ.ನಂದಿತಾ ಬಿ.ಆರ್. ಅವರು ಪದವಿ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಕಂಪ್ಯೂಟರ್ ಸೈನ್ಸ್ ವಿಭಾಗದ ದೀಕ್ಷಿತ್ ಹೆಚ್ ಯು ಮತ್ತು ಇನ್‌ಫರ್ಮೇಷನ್ ಸೈನ್ಸ್ ವಿಭಾಗದ ಪೂಜಾ ಎ.ಬಿ. ಅವರಿಗೆ 2025ನೇ ಸಾಲಿನ ಎಂಟಿಇಎಸ್ ಅತ್ಯುತ್ತಮ ವಿದ್ಯಾರ್ಥಿ ಪ್ರಶಸ್ತಿ, ಕಂಪ್ಯೂಟರ್ ಸೈನ್ಸ್ ವಿಭಾಗದ ನಂದನ್ ಸಿ.ವಿ. ಅವರಿಗೆ 2025ನೇ ಸಾಲಿನ ಅತ್ಯುತ್ತಮ ಕ್ರೀಡಾಪಟು ಪ್ರಶಸ್ತಿ ನೀಡಲಾಯಿತು. ಪ್ರತಿ ಇಂಜಿನೀಯರಿಂಗ್ ವಿಭಾಗದಲ್ಲೂ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಪೃಥ್ವಿ ಸಿ.ಪಿ, ಅರ್ಜುನ್ ಹೆಚ್, ಸೋನು ಬಿ.ಆರ್, ಚೇತನಾ ಕೆ.ಆರ್, ಶರಣ್ಯ ಕೆ.ಎಂ, ಪೂಜಾ ಎ.ಬಿ ಮತ್ತು ವಿನಯ್ ಹೆಚ್.ಆರ್ ಅವರಿಗೆ ಚಿನ್ನದ ಪದಕ ಪಡೆದರು.



ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಹೆಚ್.ಜೆ.ಅಮರೇಂದ್ರ ಕಾಲೇಜಿನ ಸಾಧನೆಗಳನ್ನು ತಿಳಿಸಿ, ಅತಿಥಿಗಳನ್ನು ಸ್ವಾಗತಿಸಿದರು. ನಿರ್ದೇಶಕ ಡಾ.ಎಸ್. ಪ್ರದೀಪ್ ವಂದನಾರ್ಪಣೆ ಮಾಡಿದರು. ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಕಾರ್ಯದರ್ಶಿ ಸಿ.ಆರ್. ಜಗದೀಶ್, ಖಜಾಂಚಿ ಹೆಚ್.ಡಿ. ಪಾರ್ಶ್ವನಾಥ್, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯ ನಿರ್ದೇಶಕರು, ಕಾಲೇಜಿನ ಡೀನ್‌ಗಳು, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

# ಹಂತ-ಹಂತವಾಗಿ ಉದ್ಯಾನವನ ಅಭಿವೃದ್ಧಿ: ಭರವಸೆ

• ಪ್ರಜೋದಯ ವರದಿ

**ಸಕಲೇಶಪುರ:** ಪುರಸಭೆ ವ್ಯಾಪ್ತಿಯಲ್ಲಿ ಉದ್ಯಾನವನಗಳಿಗೆ ಮೀಸಲಿಟ್ಟಿರುವ ಜಾಗಗಳನ್ನು ಹಂತ-ಹಂತವಾಗಿ ಅಭಿವೃದ್ಧಿಪಡಿಸಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ಭರವಸೆ ನೀಡಿದರು.

ಪಟ್ಟಣದ ಅಯ್ಯಪ್ಪಸ್ವಾಮಿ ದೇವಸ್ಥಾನದ ಮುಂಭಾಗ ದೊಡ್ಡ ಕೆರೆ ಅಭಿವೃದ್ಧಿ ಕಾಮಗಾರಿಗೆ ಭಾನುವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಪಟ್ಟಣದಲ್ಲಿ ಸಾರ್ವಜನಿಕರಿಗೆ ಬೆಳಿಗ್ಗೆ ಹಾಗು ಸಂಜೆ ವಾಯು ವಿಹಾರಕ್ಕೆ ಸ್ಥಳ ಕೊರತೆ ಇದೆ. ದೊಡ್ಡ ಕೆರೆ ಪಟ್ಟಣದ ಹೃದಯ ಭಾಗದಲ್ಲಿದ್ದು, 15 ವರ್ಷಗಳ ಹಿಂದೆ ದಿ.ಬೈಕೆರೆ ನಾಗೇಶ್ ಅವರ ಕನಸಿನ ಕೂಸಾಗಿ ಈ ಕೆರೆಯನ್ನು ಉಳಿಸಿ ಅಭಿವೃದ್ಧಿಪಡಿಸುವ ಕಾರ್ಯ ಕೈಗೊಳ್ಳಲಾಗಿತ್ತು. ಮುಂದಿನ ಹಂತದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.



ಕೆರೆ ಅಭಿವೃದ್ಧಿಗೆ 35 ಲಕ್ಷ ರೂ. ಮಂಜೂರು ಮಾಡಲಾಗಿತ್ತು. ಅದಕ್ಕೆ ಪುರಸಭೆಯ ಅನುದಾನ ಸೇರಿಸಿ ಒಟ್ಟು 50 ಲ.ರೂ. ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತದೆ. ಮಕ್ಕಳಿಗೆ ಆಟೋಪಕರಣ, ಹಿರಿಯರಿಗೆ ವ್ಯಾಯಾಮ ಸಲಕರಣೆ, ಜಿಮ್ ಸಾಧನ, ಬೆಳಕು ವ್ಯವಸ್ಥೆ ಹಾಗು ಪೈಪ್‌ಗಳಿಗೆ ಬಣ್ಣ ಹಚ್ಚುವ ಮೂಲಕ ಕೆರೆಯ ಸುತ್ತಲ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ವಿವರಿಸಿದರು.

ಪಟ್ಟಣದ ಸೌಂದರ್ಯ ವರ್ಧನೆಗೆ ಒತ್ತು ನೀಡಲಾಗುತ್ತಿದ್ದು, ಉದ್ಯಾನವನಗಳಿಗೆ ಮೀಸಲಿಟ್ಟಿರುವ ಎಲ್ಲಾ ಜಾಗಗಳಲ್ಲಿ ಪಾರ್ಕ್ ನಿರ್ಮಿಸಲಾಗುವುದು. ಬಾಳೆಗದ್ದೆ, ಚಂಪಕನಗರ, ಮಲ್ಲಿಕಾರ್ಜುನ ನಗರ ಸೇರಿ ವಿವಿಧ ಪ್ರದೇಶಗಳಲ್ಲಿ 7 ರಿಂದ 8 ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಅನುದಾನ ಮೀಸಲಿಡಲಾಗಿದೆ. ಟೆಂಡರ್ ಪ್ರಕ್ರಿಯೆಯೂ ಶೀಘ್ರ ಪೂರ್ಣಗೊಳ್ಳಲಿದೆ ಎಂದು ಹೇಳಿದರು.

### ಕ್ಷೇತ್ರ ಅಭಿವೃದ್ಧಿಗೆ ಕ್ರಮ

ಪಟ್ಟಣದ ಸ್ವಾಗತ ಬೋರ್ಡ್‌ಗಳ ನಿರ್ಮಾಣ, ರಸ್ತೆ ಸುಧಾರಣೆ, ಬೀದಿ ವ್ಯಾಪಾರಿಗಳಿಗೆ ವ್ಯವಸ್ಥಿತ ಶೆಡ್, ಬಸ್ ತಂಗುದಾಣ ಸೇರಿ ಹಲವು ಅಭಿವೃದ್ಧಿ ಯೋಜನೆಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತರಲು ಪ್ರಯತ್ನಿಸುತ್ತಿದ್ದೇನೆ. ರಾಜಕೀಯಕ್ಕಿಂತ ಪಟ್ಟಣದ ಅಭಿವೃದ್ಧಿ ಮುಖ್ಯ. ಅದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಮನವಿ ಮಾಡಿದರು.

ಪುರಸಭೆ ಮಾಜಿ ಸದಸ್ಯ ಪ್ರಜ್ವಲ್ ಅವರು ಮಾತನಾಡಿ, ಈ ಕೆರೆಯು ನಗರದ ಮಧ್ಯಭಾಗದಲ್ಲಿರುವ ಪ್ರಮುಖ ಸಾರ್ವಜನಿಕ ಸ್ಥಳವಾಗಿದ್ದು, ಹಿಂದಿನ ಅವಧಿಗಳಲ್ಲಿ ಹಲವು ಜನಪ್ರತಿನಿಧಿಗಳು ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇದೀಗ ಸಮಗ್ರ ಅಭಿವೃದ್ಧಿ ಕಾರ್ಯ ಕೈಗೊಳ್ಳುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಪುರಸಭೆ ಮಾಜಿ ಸದಸ್ಯರಾದ ರೇಖಾ, ರುದ್ರಕುಮಾರ್, ವನಜಾಕ್ಷಿ, ಪುರಸಭೆ ಮಾಜಿ ಅಧ್ಯಕ್ಷ ಜಾಕೀರ್, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ಸುಜಾತ ಇತರರಿದ್ದರು.

# ಸುಬ್ರಹ್ಮಣ್ಯ ಸ್ವಾಮಿ ದರ್ಶನಕ್ಕೆ ಭಕ್ತರ ದಂಡು



• ಪ್ರಜೋದಯ ವರದಿ

**ಅರಕಲಗೂಡು:** ದಕ್ಷಿಣ ಕಾಶಿ ಎಂದೇ ಪ್ರಖ್ಯಾತಿ ಹೊಂದಿರುವ ರಾಮನಾಥಪುರದ ಪ್ರಸನ್ನ ಶ್ರೀ ಸುಬ್ರಹ್ಮಣ್ಯಸ್ವಾಮಿ ತುಳು ಷಷ್ಠಿ ಮಹಾ ರಥೋತ್ಸವ ಹಿನ್ನಲೆಯಲ್ಲಿ ಶ್ರೀ ಕ್ಷೇತ್ರಕ್ಕೆ ಭಕ್ತರ ದಂಡು ಹರಿದು ಬರುತ್ತಿದೆ.

ಒಂದು ತಿಂಗಳು ನಡೆಯುವ ಜಾತ್ರೆಗೆ ನ.26 ರಂದು ಚಾಲನೆ ದೊರೆತಿದ್ದು, ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದಾರೆ. ಡಿ.26ರ ಶುಕ್ರವಾರ ಮಹಾ ರಥೋತ್ಸವ ನಡೆಯಲಿದೆ. ರಜಾ ದಿನವಾದ ಭಾನುವಾರ ನಿರೀಕ್ಷೆಗೂ ಮೀರಿ ಜನರು ಜಮಾಯಿಸಿದ್ದರು. ಜಾತ್ರಾ ಮೈದಾನ, ದೇವಾಲಯ ಮತ್ತು ಕಾವೇರಿ ನದಿ ಸ್ನಾನಘಟ್ಟದಲ್ಲಿ ಭಕ್ತರ ಸಂಖ್ಯೆ ವಿಪರೀತವಾಗಿತ್ತು.

ಭಕ್ತರು ಸುಬ್ರಹ್ಮಣ್ಯಸ್ವಾಮಿ ದೇವಾಲಯದಲ್ಲಿ ಹರಕೆ ತೀರಿಸಿ, ವಾಸಾಂಜನೇಯ, ಅಗಸ್ತೇಶ್ವರ, ಪಟ್ಟಾಭಿರಾಮ, ರಾಘವೇಂದ್ರಮಠ, ವರದಾನ ಬಸವೇಶ್ವರ, ಚತುರ್ಯುಗಮೂರ್ತಿ ರಾಮೇಶ್ವರ ಸೇರಿ ವಿವಿಧ ದೇವಾಲಯಗಳಿಗೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

# ದೇಶ-ಭಾಷೆಯ ಗಡಿ ಮೀರಿ ಪ್ರೇಮಿಗಳ ಮದುವೆ

• ಪ್ರಜೋದಯ ವರದಿ

**ಬೇಲೂರು:** ಪ್ರೀತಿ ದೇಶ, ಭಾಷೆ, ಜಾತಿ-ಧರ್ಮಗಳನ್ನು ಮೀರಿದ್ದು ಎನ್ನುವ ಮಾತನ್ನು ಸಾಬೀತು ಮಾಡುವ ವಿವಾಹವೊಂದು ಭಾನುವಾರ ಪಟ್ಟಣದಲ್ಲಿ ಜರುಗಿದೆ.

ಬೇಲೂರು ಮೂಲದ ಯುವತಿಯೊಬ್ಬರು ಇಂಗ್ಲೆಂಡ್ ಮೂಲದ ಯುವಕನೊಂದಿಗೆ ಭಾರತೀಯ ಹಿಂದೂ ಸಂಪ್ರದಾಯದಂತೆ ಸಪ್ತಪದಿ ತುಳಿದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ತಾಲ್ಲೂಕಿನ ಇಬ್ಬಿಡು ಗ್ರಾಮದ ವಿಜಯೇಂದ್ರ ಅವರ ಪುತ್ರಿ ಹೇಮಶ್ರೀ ಅವರು ಇಂಗ್ಲೆಂಡ್ ಮೂಲದ ಜಾಯ್ ಅವರನ್ನು ವರಿಸಿದ್ದಾರೆ. ಇಂಗ್ಲೆಂಡ್‌ನಿಂದ ಕುಟುಂಬದೊಂದಿಗೆ ಬಂದಿದ್ದ ಜಾಯ್ ಸಂಪ್ರದಾಯಬದ್ಧವಾಗಿ ವಿವಾಹವಾದರು.



ಸುಮಾರು ಒಂದೂವರೆ ವರ್ಷಗಳ ಹಿಂದೆ ಉದ್ಯೋಗ ನಿಮಿತ್ತ ಇಂಗ್ಲೆಂಡ್‌ಗೆ ತೆರಳಿದ್ದ ಹೇಮಶ್ರೀ ಅವರು ಅಲ್ಲಿ ತಮ್ಮ ಸಹೋದ್ಯೋಗಿಯಾಗಿ ಪರಿಚಯವಾಗಿದ್ದ ಜಾಯ್ ಅವರನ್ನು ಪ್ರೀತಿಸಿದ್ದರು. ಇಬ್ಬರೂ ಕುಟುಂಬಸ್ಥರ ಒಪ್ಪಿಗೆಯೊಂದಿಗೆ ಹಿಂದೂ ಸಂಪ್ರದಾಯದಂತೆ ವಿವಾಹವಾಗಿದ್ದು, ಈ ವಿವಾಹವು ಸ್ಥಳೀಯರ ಗಮನ ಸೆಳೆದಿದೆ.

# ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು

• ಪ್ರಜೋದಯ ವರದಿ

ಹಾಸನ: ಕಾರು ಡಿಕ್ಕಿಯಾಗಿ ಗಂಭೀರ ಗಾಯಗೊಂಡಿದ್ದ ಬೈಕ್ ಸವಾರ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಅನುಗವಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಾಜೇಗೌಡ ಮೃತರು. ಡಿ. 6ರಂದು ಜಮೀನು ಕೆಲಸ ಮುಗಿಸಿ ಬೈಕ್‌ನಲ್ಲಿ ಮನೆಗೆ ಬರುತ್ತಿದ್ದಾಗ ದುದ್ದ ಕಡೆಯಿಂದ ವೇಗವಾಗಿ ಬಂದ ಕಾರು ಚಾಲಕ ಡಿಕ್ಕಿ ಮಾಡಿದ್ದಾನೆ. ಗಾಯಾಳುವನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಶನಿವಾರ ಮೃತಪಟ್ಟಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಡಿ-17ಕ್ಕೆ ಭಾರತದ ನೌಕಾಪಡೆಗೆ ಎಂಎಚ್60ಆರ್ ಹೆಲಿಕಾಪ್ಟರ್ ನಿಯೋಜನೆ

• ಪ್ರಜೋದಯ ವರದಿ

**ನವದೆಹಲಿ:** ಭಾರತದ ನೌಕಾಪಡೆಯು ತನ್ನ 2ನೇಯ ಎಂಎಚ್ 60ಆರ್ ಹೆಲಿಕಾಪ್ಟರ್ ಸ್ಕ್ವಾಡ್ರನ್ ಅನ್ನು ಗೋವಾದ ಐಎನ್‌ಎಸ್ ಹನ್ಸ್‌ನಲ್ಲಿ ಡಿ.17ರಂದು ನಿಯೋಜಿಸಲಿದೆ.

ಸುಧಾರಿತ ಆಯುಧಗಳು, ಸೆನ್ಸರ್‌ಗಳು ಹಾಗೂ ಸಂಯೋಜಿತ ಎಲೆಕ್ಟ್ರಾನಿಕ್ಸ್ ಸೌಲಭ್ಯಗಳನ್ನು ಒಳ ಗೊಂಡ ಈ ಹೆಲಿಕಾಪ್ಟರ್ ನೌಕಾಪಡೆಯ ಪ್ರಮುಖ ಆಸ್ತಿ. ಸಾಂಪ್ರದಾಯಿಕ ಮತ್ತು ಅನಿರೀಕ್ಷಿತ ದಾಳಿಗಳನ್ನು ಎದುರಿಸುವ ಸಾಮರ್ಥ್ಯವನ್ನು ಎಂಎಚ್ 60ಆರ್ ಹೊಂದಿದೆ. ನೌಕಾಪಡೆ ಸಿಬ್ಬಂದಿ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ಸಮ್ಮುಖದಲ್ಲಿ ನಿಯೋಜನೆ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



# ಬಾಲಕಿ ಅತ್ಯಾಚಾರ, ಕೊಲೆ: ಅಪರಾಧಿಯ ಕ್ಷಮಾದಾನ ಅರ್ಜಿ ತಿರಸ್ಕರಿಸಿದ ರಾಷ್ಟ್ರಪತಿ

• ಪ್ರಜೋದಯ ವರದಿ



**ನವದೆಹಲಿ:** ಮಹಾರಾಷ್ಟ್ರದಲ್ಲಿ 2012ರಲ್ಲಿ ಎರಡು ವರ್ಷದ ಬಾಲಕಿಯನ್ನು ಅಪಹರಿಸಿ, ಅತ್ಯಾಚಾರ ಎಸಗಿ ಹತ್ಯೆಗೈದ ಪ್ರಕರಣದಲ್ಲಿ ಶಿಕ್ಷೆಗೊಳಗಾದ ವ್ಯಕ್ತಿ ಕ್ಷಮಾದಾನ ಕೋರಿ ಸಲ್ಲಿಸಿದ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ತಿರಸ್ಕರಿಸಿದ್ದಾರೆಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

2022ರ ಜುಲೈ 25ರಂದು ಅಧಿಕಾರ ವಹಿಸಿಕೊಂಡ ಬಳಿಕ ರಾಷ್ಟ್ರಪತಿ ಮುರ್ಮು ಅವರು ತಿರಸ್ಕರಿಸಿದ 3ನೇ ಕ್ಷಮಾದಾನ ಅರ್ಜಿ ಇದಾಗಿದೆ. ಅಪರಾಧಿ ರವಿ ಅಶೋಕ್ ಘುಮಾರೆಗೆ ವಿಧಿಸಿದ್ದ ಮರಣದಂಡನೆಯನ್ನು ಸುಪ್ರೀಂ ಕೋರ್ಟ್ 2019ರ ಅಕ್ಟೋಬರ್ 3ರಂದು ಎತ್ತಿಹಿಡಿದಿತ್ತು. ಲೈಂಗಿಕ ಹಸಿವನ್ನು ನೀಗಿಸಿಕೊಳ್ಳಲು ಆತ ಎಲ್ಲಾ ನೈಸರ್ಗಿಕ, ಸಾಮಾಜಿಕ ಮತ್ತು ಕಾನೂನಿನ ಮಿತಿಗಳನ್ನು ಮೀರಿದ್ದಾನೆ ಎಂದು ಕೋರ್ಟ್ ಹೇಳಿತ್ತು.

ಇನ್ನೂ ಅರಳಬೇಕಿದ್ದ ಜೀವವೊಂದನ್ನು ಆ ವ್ಯಕ್ತಿ ನಿರ್ದಯೆಯಿಂದ ಕೊಂದಿದ್ದಾನೆ. ಎರಡು ವರ್ಷದ ಮಗುವಿನ ಮೇಲೆ ಎಸಗಿದ ಕೃತ್ಯವು ಆತನ ಕೊಳಕು ಮತ್ತು ವಿಕೃತ ಮನಸ್ಥಿತಿಯನ್ನು ತೋರಿಸುತ್ತದೆಯಲ್ಲದೆ, ಕ್ರೌರ್ಯದ ಭಯಾನಕ ಕಥೆಯನ್ನು ಪ್ರದರ್ಶಿಸುತ್ತದೆ ಎಂದು ನ್ಯಾಯಮೂರ್ತಿ ಸೂರ್ಯಕಾಂತ್ (ಭಾರತದ ಈಗಿನ ಮುಖ್ಯ ನ್ಯಾಯಮೂರ್ತಿ) ಅವರನ್ನು ಒಳಗೊಂಡ ತ್ರಿಸದಸ್ಯ ಪೀಠ ಆ ಸಂದರ್ಭದಲ್ಲಿ ಹೇಳಿತ್ತು.

ಮಹಾರಾಷ್ಟ್ರದ ಜಲ್ನಾ ನಗರದ ಇಂದಿರಾನಗರ ಪ್ರದೇಶದಲ್ಲಿ 2012ರ ಮಾರ್ಚ್ 6ರಂದು ಈ ಘಟನೆ(ಬಾಲಕಿ ಮೇಲೆ ಅತ್ಯಾಚಾರ, ಕೊಲೆ) ನಡೆದಿತ್ತು. ಬಾಲಕಿಗೆ ಚಾಕೊಲೇಟ್ ನೀಡುವ ಆಮಿಷ ಒಡ್ಡಿ ಘುಮಾರೆ ಕೃತ್ಯ ಎಸಗಿದ್ದ. ವಿಚಾರಣಾ ನ್ಯಾಯಾಲಯವು 2015ರ ಸೆಪ್ಟೆಂಬರ್ 16ರಂದು ಆತನನ್ನು ಅಪರಾಧಿ ಎಂದು ಘೋಷಿಸಿ ಮರಣದಂಡನೆ ವಿಧಿಸಿತ್ತು. 2016ರ ಜನವರಿಯಲ್ಲಿ ಬಾಂಬೆ ಹೈಕೋರ್ಟ್ ಈ ಆದೇಶವನ್ನು ಎತ್ತಿಹಿಡಿದಿತ್ತು.

# ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅಸ್ತಂಗತ

» ಮೊದಲನೇ ಪುಟದಿಂದ

ಕೂಗು ಎದ್ದಾಗ ವೀರಶೈವ ಲಿಂಗಾಯತ ಎರಡೂ ಒಂದೇ ಎಂದು ಪ್ರಬಲವಾಗಿ ಪ್ರತಿಪಾದಿಸಿದರು. ವೀರಶೈವ ಲಿಂಗಾಯತ ಮಠಾಧೀಶರನ್ನು ಒಗ್ಗೂಡಿಸಲು ಮುಂದಾಗಿದ್ದ ಶಿವಶಂಕರಪ್ಪ ಈ ನಿಟ್ಟಿನಲ್ಲಿ ಪ್ರಯತ್ನ ಆರಂಭಿಸಿದ್ದರು. ಮೊದಲ ಹೆಜ್ಜೆಯಾಗಿ ಪಂಚಪೀಠ ಮಠಾಧೀಶರ ಸಮ್ಮೇಳವನ್ನು ಆಯೋಜಿಸಿ ಯಶಸು ಕಂಡಿದ್ದರು. ವಿರಕ್ತ ಮತ್ತು ಗುರುಪರಂಪರೆ ಒಗ್ಗೂಡಿದರೆ ಸಮಾಜ ಸಬಲವಾಗುತ್ತದೆಂಬ ಬಲವಾದ ನಂಬಿಕೆ ಅವರದಾಗಿತ್ತು.

### ಪುರಸಭೆ ಸದಸ್ಯರಾಗಿ ರಾಜಕೀಯ ಪ್ರವೇಶ

1969ರಲ್ಲಿ ದಾವಣಗೆರೆ ಪುರಸಭೆ ಸದಸ್ಯರಾಗಿ ಶಿವಶಂಕರಪ್ಪ ಅವರ ರಾಜಕೀಯ ಜೀವನ ಆರಂಭವಾಯಿತು. 1971ರಲ್ಲಿ ಪುರಸಭೆ ಅಧ್ಯಕ್ಷರಾದರು. ದಶಕಗಳ ಕಾಲ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಖಜಾಂಚಿಯಾಗಿ ಸೇವೆ ಸಲ್ಲಿಸಿದ ಅವರು, 2023ರಲ್ಲಿ ನಡೆದ ಚುನಾವಣೆಯಲ್ಲಿ ಶೇ. 57.59 ಮತಗಳೊಂದಿಗೆ ಆರನೇ ಅವಧಿಗೆ ಆಯ್ಕೆಯಾದರು. ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ್ ಕುಮಾರ್ ಅವರನ್ನು 27,888 ಮತಗಳ ಅಂತರದಿಂದ ಸೋಲಿಸಿದ್ದರು.

# ರಾಜಿ ಸಂಧಾನದಿಂದ ಶೀಘ್ರ ನ್ಯಾಯ-ಹಣ ಉಳಿತಾಯ

» ಮೊದಲನೇ ಪುಟದಿಂದ

ಕಲ್ಪನ ಅವರು ಮಾತನಾಡಿ, ಜನಸಾಮಾನ್ಯರ ಅನುಕೂಲಕ್ಕಾಗಿ ಶೀಘ್ರವಾಗಿ ಪ್ರಕರಣ ಇತ್ಯರ್ಥವಾಗಬೇಕೆಂಬ ಸದುದ್ದೇಶದಿಂದ ಮೆಗಾ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ. ಪಟ್ಟಣದ ಎಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಕಾನೂನು ಪ್ರಕಾರ ರಾಜಿ ಆಗಬಹುದಾದ ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿ ಇಬ್ಬರಿಗೂ ನ್ಯಾಯ ಒದಗಿಸುವ ಉದ್ದೇಶದಿಂದ ಮೆಗಾ ಲೋಕ ಅದಾಲತ್ ಆಯೋಜಿಸಲಾಗಿದೆ. ಹಲವು ವರ್ಷಗಳ ಕಾಲ ಕಾನೂನು ಹೋರಾಟ ಮಾಡಿ ಒಬ್ಬರು ಗೆಲ್ಲುತ್ತಾರೆ, ಮತ್ತೊಬ್ಬರಿಗೆ ಸೋಲಾಗುತ್ತದೆ. ಆದರೆ, ಅದಾಲತ್‌ನಲ್ಲಿ ಇಬ್ಬರಿಗೂ ತೃಪ್ತಿಯಾಗುವ ತೀರ್ಮಾನ ಮಾಡಲಾಗುತ್ತದೆ. ಲೋಕ ಅದಾಲತ್‌ನಲ್ಲಿ ರಾಜಿಯಾದ ಪ್ರಕರಣಗಳ ಆದೇಶ ಅಂತಿಮವಾಗಿರುತ್ತದೆ. ಕಡಿಮೆ ಖರ್ಚಿನಲ್ಲಿ ಶೀಘ್ರ ಇತ್ಯರ್ಥ ಪಡಿಸಿಕೊಳ್ಳಲು ಅವಕಾಶವಿದೆ. ಪ್ರಕರಣಗಳನ್ನು ಹೊರತುಪಡಿಸಿ ಇತರೆ ಪ್ರಕರಣಗಳನ್ನು ರಾಜಿ ಮಾಡಿಕೊಳ್ಳಬಹುದು. ಕಕ್ಷಿದಾರರು ಬಹಳ ವರ್ಷ ಅಲೆದಾಡುವ ಬದಲು ಲೋಕ ಅದಾಲತ್‌ನಲ್ಲಿ ರಾಜಿ-ಸಂಧಾನದ ಮೂಲಕ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡರೆ ಹಣ ಮತ್ತು ಸಮಯ ಎರಡೂ ಉಳಿ ತಾಯವಾಗಲಿದ್ದು, ಸಾರ್ವಜನಿಕರು ಲೋಕ ಅದಾಲತ್‌ನ ಸದುಪಯೋಗ ಪಡೆದುಕೊಳ್ಳುವಂತೆ ಅವರು ಕರೆ ನೀಡಿದರು.

ಪಟ್ಟಣದ ಏಳು ನ್ಯಾಯಾಲಯಗಳಲ್ಲಿ 14,829 ಪ್ರಕರಣಗಳು ಬಾಕಿ ಇದ್ದು, ಮೆಗಾ ಲೋಕ ಅದಾಲತ್‌ನಲ್ಲಿ ವಿವಿಧ ರೀತಿಯ ಸುಮಾರು 819 ಪ್ರಕರಣಗಳನ್ನು ಲೋಕ ಅದಾಲತ್‌ಗಾಗಿ ತೆಗೆದುಕೊಂಡು ಅವುಗಳ ಪೈಕಿ 537 ಪ್ರಕರಣಗಳು ರಾಜಿ ಸಂಧಾನ ಮಾಡಿಸಿ ಬಗೆಹರಿದಿವೆ. ಒಟ್ಟು 44, 96,5726 ರೂ. ದಂಡ ವಸೂಲಿ, ಪರಿಹಾರ, ವಿಮೆ ಮೌಲ್ಯ ಒಳಗೊಂಡಿದೆ ಎಂದರು.

ಮೆಗಾ ಲೋಕ ಅದಾಲತ್‌ನಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ವಿ.ಕುಸುಮ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಅರುಣ. ಎಸ್.ಗುಡಿಗೆನ್ನವರ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಟಿ.ಪಿ. ಪುರುಷೋತ್ತಮ್, 2ನೇ ಅಧಿಕ ಸಿವಿಲ್ ನ್ಯಾಯಾಧೀಶರಾದ ಸುನಿತಾ ಹಾಗು ಇತರರಿದ್ದರು.

# ತಿರುಪತಿಹಳ್ಳಿ ಬೆಟ್ಟದ ಮೇಲೆ ಜೆಮಿನಾಯ್ಡ್ ಉಲ್ಕೆಗಳ ಸುರಿಮಳೆ

• ಪ್ರಜೋದಯ ವರದಿ

**ಹಾಸನ:** ತಿರುಪತಿಹಳ್ಳಿ ಬೆಟ್ಟದ ಮೇಲೆ ಸುಮಾರು 50ಕ್ಕೂ ಅಧಿಕ ಉಲ್ಕೆಗಳ ಸುರಿಮಳೆ ಸಂಭವಿಸಿತು. ಅದನ್ನು ವಿದ್ಯಾರ್ಥಿಗಳು, ಪೋಷಕರು ಹಾಗೂ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾರ್ವಜನಿಕರು ಕಣ್ತುಂಬಿಸಿಕೊಡು ಸಂಭ್ರಮ ಪಟ್ಟರು.

ಡಿಸೆಂಬರ್ 13ರಂದು ಭಾರತ ಜ್ಞಾನ ವಿಜ್ಞಾನ ಸಮಿತಿ, ಹಾಸನ ಜಿಲ್ಲಾ ಸಮಿತಿ ನಿಟ್ಟೂರು ಗ್ರಾಮ ಪಂಚಾಯಿತಿಯ ಸಹಯೋಗ ಹಾಗೂ ಶ್ರೀ ಚಿಕ್ಕರಂಗನಾಥ ಸೇವಾ ನ್ಯಾಸದ ಸಹಕಾರದೊಂದಿಗೆ ತಿರುಪತಿಯಲ್ಲಿ ಬೆಟ್ಟದಲ್ಲಿ ಆಕಾಶದ ಅದ್ಭುತ ಉಲ್ಕೆಗಳ ಸುರಿಮಳೆ ಎಂಬ ಶೀರ್ಷಿಕೆಯಡಿ ಆಕಾಶ ವೀಕ್ಷಣೆ ಕಾರ್ಯಕ್ರಮವನ್ನು ಡಿಸೆಂಬರ್ 13ರ ರಾತ್ರಿ 12 ಗಂಟೆಗೆ ಆಯೋಜಿಸಿತ್ತು.

ಜಿಲ್ಲೆಯ ವಿವಿಧ ಭಾಗಗಳಿಂದ ತಮ್ಮ ಸ್ವಂತ ವಾಹನ ಹಾಗೂ ಬಿಜಿವಿಎಸ್ ಆಯೋಜಿಸಿದ್ದ ಬಸ್‌ಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳು, ಸಾರ್ವಜನಿಕರು ಹಾಗೂ ವಿಜ್ಞಾನ ಆಸಕ್ತರು ಸೇರಿ 150ಕ್ಕೂ ಹೆಚ್ಚು ಮಂದಿ ಸಂಜೆ ಆರು ಗಂಟೆಯಿದಲೂ ಬೆಟ್ಟದ ಮೇಲೆ ಕಿಕ್ಕಿರಿದು ನೆರೆದು ಬೆಟ್ಟದ ಪಶ್ಚಿಮ ತುದಿಯಿಂದ ಸರ್ಯಾಸ್ತಮಾನ ನೋಡಿ ಬೆರಗಾದರು, ಟೆಲಿಸ್ಕೋಪಿನ ಮೂಲಕ ಶನಿಗ್ರಹದ ಬಳೆಗಳನ್ನು ಗುರುಗ್ರಹದ ಸಾಲು ಹಿಡಿದು ನಿಂತಿದ್ದ ಗ್ಯಾನಿಮಿಡ, ಕ್ಯಾಲೆಸ್ಟೊ, ಐಯೋ ಹಾಗೂ ಯೂರೋಪ ಉಪಗ್ರಹಗಳನ್ನು ವೀಕ್ಷಿಸಿ, ಉಲ್ಕಾಪಾತ ನೋಡಿ ಸಂಭ್ರಮಿಸಿದರು ಹಾಗೂ ಸಂಪನ್ಮೂಲ ವ್ಯಕ್ತಿಗಳ ಸುತ್ತ ಬಂಡೆಯ ಮೇಲೆ ಅಂಗಾತ ಮಲಗಿ ತಮ್ಮ ರಾಶಿ ಹಾಗೂ ಮಧುವೆಯಲ್ಲಿ ತೋರಿಸುವ ಅರುಂಧತಿ ನಕ್ಷತ್ರಗಳನ್ನು ನೋಡಿ ಖುಷಿಪಟ್ಟರು ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ವಿಧ ವಿಧ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರು. ಜೊತೆ ಜೊತೆಗೆ ಸರ್ ಸರ್ ಎಂದು ಬೀಳುತ್ತಿದ್ದ ಒಂದೊಂದೆ ಉಲ್ಕೆಗಳನ್ನು ಎಣಿಸಿ ಎಣಿಸಿ ಕುಣಿದಾಡಿದರು. 11ಗಂಟೆ ವೇಳೆಗೆ 8 ರಿಂದ 10 ಬೀಳುತ್ತಿದ್ದ ಉಲ್ಕೆಗಳು 11 ರ ನಂತರ 10ರಿಂದ 15ಕ್ಕೇರಿತು ನಂತರ ಸಂಖ್ಯೆಯಲ್ಲಿ ಸ್ವಲ್ಪ ಏರಿಕೆ ಕಂಡಿತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ತುಮಕೂರು ವಿಜ್ಞಾನ ಕೇಂದ್ರದ ರವಿಶಂಕರ ಅವರು ಆಕಾಶ ವೀಕ್ಷಣೆ ಮಾಡುವ ವಿಧಾನ, ವಿವಿಧ ಗ್ರಹಗಳು ಹಾಗೂ ಆ ರಾತ್ರಿ ಕಾಣಿಸಿಕೊಳ್ಳುವ ಉಲ್ಕೆಗಳನ್ನು ಯಾವ ದಿಕ್ಕಿನಲ್ಲಿ ವೀಕ್ಷಿಸಬೇಕೆಂಬುದನ್ನು ವಿವರಿಸಿದರು. ಅಹಮದ್ ಅಗರೆ ಅವರು ಪಿಪಿಟಿ ಮೂಲಕ ಆಕಾಶದ ರಾಶಿ ನಕ್ಷತ್ರಗಳನ್ನು ಹೇಗೆ ಗುರುತಿಸಬೇಕೆಂಬುದನ್ನು ತಿಳಿಸಿ, ನೇರವಾಗಿ ಆಕಾಶದಲ್ಲಿಯೇ ಅವುಗಳನ್ನು ಗುರುತಿಸುವ ವಿಧಾನವನ್ನು ಪ್ರಾಯೋಗಿಕವಾಗಿ ವಿವರಿಸಿದರು.



ಸಂಪನ್ಮೂಲ ವ್ಯಕ್ತಿ ಕೆ.ಎಸ್.ರವಿಕುಮಾರ್ ಅವರು ಆಕಾಶ ಮತ್ತು ಆರೋಗ್ಯ ವಿಷಯದ ಕುರಿತು ಪಿಪಿಟಿ ಮೂಲಕ ಆಕಾಶ ವೀಕ್ಷಣೆಯಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಆಗುವ ಲಾಭಗಳನ್ನು ವಿವರಿಸಿದರು. ನಂತರ ಸಂಪನ್ಮೂಲ ವ್ಯಕ್ತಿ ಕವಿತಾ ಕೆ.ವಿ. ಅವರು ಸೌರಮಂಡಲದ ಉಗಮ ಹಾಗೂ ಉಲ್ಕಾಪಾತ ಸಂಭವಿಸುವ ಕಾರಣಗಳನ್ನು ವಿಡಿಯೋ ಮತ್ತು ಪಿಪಿಟಿ ಮೂಲಕ ವಿವರಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಲಾ-ಕಾಲೇಜುಗಳ ಮಕ್ಕಳಿಂದ ಹಿಡಿದು ಮಕ್ಕಳ ಪೋಷಕರು, ಗ್ರಾಮ ಪಂಚಾಯತಿ ಅಧ್ಯಕ್ಷ ಕಾರ್ಯದರ್ಶಿಗಳು, ಎಂ.ಸಿ.ಎಫ್ ನ ವಿಜ್ಞಾನಿಗಳು, ಊರಿನ ಜನರು ಎಲ್ಲರೂ ನೇರವಾಗಿ 50ಕ್ಕೂ ಹೆಚ್ಚು ಉಲ್ಕೆಗಳು ಆಕಾಶದಲ್ಲಿ ಬೀಳುವುದನ್ನು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಉಲ್ಕೆಗಳ ರೂಪದಲ್ಲಿ ಅಲಂಕರಿಸಿದ್ದ ಚಾಕೊಲೇಟುಗಳನ್ನು ಸಭಿಕರ ಮೇಲೆ ಎರಚುವ ಮೂಲಕ ವಿನೂತನವಾಗಿ ಉದ್ಘಾಟಿಸಿದ ನಿಟ್ಟೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಎನ್.ಎಂ ನಟರಾಜ್ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಕಾಶದ ಅದ್ಭುತ ಉಲ್ಕೆಗಳ ಬಗ್ಗೆ ಅರಿವು ಮೂಡಿಸುತ್ತಿರುವುದು ಶ್ಲಾಘನೀಯವೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿಟ್ಟೂರು ಗ್ರಾಮ ಪಂಚಾಯಿತಿ ಸದಸ್ಯ ಚಂದ್ರಶೇಖರ್ ಮಾತನಾಡಿ, ಇಂದಿನ ಯುವ ಜನತೆ ಮೊಬೈಲ್‌ನಂತಹ ಆಧುನಿಕ ತಂತ್ರಜ್ಞಾನಗಳಿಗೆ ಮಾರು ಹೋಗದೆ ಇಂತಹ ಕಾರ್ಯಕ್ರಮಗಳ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದರು.

ನಿಟ್ಟೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಹಾಗೂ ಹಾಸನ ತಾಲ್ಲೂಕು ಬಿಜಿವಿಎಸ್ ಅಧ್ಯಕ್ಷ ಡಾ.ಹೆಚ್.ಜಿ. ಮಂಜುನಾಥ್ ಮಾತನಾಡಿ, ಖಗೋಳ ವಿಜ್ಞಾನದ ಮಹಾತಾಯಿ ಎನ್ನುತ್ತಾರೆ.ಆಕಾಶದಲ್ಲಿ ನಡೆಯುವ ಸೌರ ವಿದ್ಯಮಾನಗಳು ವಿಶ್ವದ ವಿಕಾಸದ ಗುಟ್ಟನ್ನು ಹುದುಗಿಸಿಟ್ಟುಕೊಂಡಿರುತ್ತವೆ ಅವನ್ನು ವೀಕ್ಷಿಸಿ ಅಧ್ಯಯನ ಮಾಡುವ ಮೂಲಕ ಅದರೊಳಗಿನ ಅವಿತ ಸತ್ಯವನ್ನು ಬಯಲು ಮಾಡುವುದೇ ವಿಜ್ಞಾನ ಅಂತಹ ವಿಜ್ಞಾನಿಗಳು ನೀವಾಗಿ ದೇಶವನ್ನು ವಿಜ್ಞಾನ ಸ್ವಾವಲಂಬನೆಯತ್ತ ಕೊಂಡೊಯ್ಯುವ ವಿಜ್ಞಾನಿಗಳಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಕುಮಾರ್, ತಿರುಪತಿಹಳ್ಳಿ ಬೆಟ್ಟದ ಸಭಾಂಗಣದ ಉಸ್ತುವಾರಿ ಬಿ.ಎಸ್. ರಂಗನಾಥ್, ಬಿಜಿವಿಎಸ್ ಹಾಸನ ಜಿಲ್ಲಾ ಉಪಾಧ್ಯಕ್ಷ ಧರ್ಮರಾಜು, ಮಲ್ನಾಡ್ ಇಂಜಿನೀಯರಿಗ್ ಕಾಲೇಜು ಉಪನ್ಯಾಸಕಿ ಉಮಾ, ಎ.ವಿ.ಕೆ.ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಚಂದ್ರಶೇಖರ್ ಭಾಗವಹಿಸಿದ್ದರು.

ಬಿಜಿವಿಎಸ್ ಹಾಸನ ತಾಲೂಕು ಕಾರ್ಯದರ್ಶಿ ಲೋಲಾಕ್ಷಿ ಸ್ವಾಗತಿಸಿದರು. ಬಿಜಿವಿಎಸ್ ಜಿಲ್ಲಾ ಖಜಾಂಚಿ ರವೀಶ್ ನಿರೂಪಣೆ ಮಾಡಿ ವಂದಿಸಿದರು. ಕವಿತ, ರವೀಶ್, ಜಾನಕಿ, ಹಾಗೂ ಮೋನಿಕಾ ನಡುನಡುವೆ ಖಗೋಳ ರಸಪ್ರಶನೆಗಳನ್ನು, ಪ್ರಯೋಗಗಳನ್ನು ಮಾಡಿ ಬಹುಮಾನ ವಿತರಿಸಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019